# ಸಂಭಾವ್ಯ ಪ್ರಶ್ನೆಗಳು

ಜೆಎಸ್‌ಎಸ್ ಮಹಾವಿದ್ಯಾಪೀಠ

## ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್


ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಛಯ

ಮಾನಸಗಂಗೋತ್ರಿ

ಮೈಸೂರು – 570 006

ಕರ್ನಾಟಕ

ದೂರವಾಣಿ : 0821 –2548315, 2548316

ಇ–ಮೇಲ್ : jsspda@gmail.com, ಯುಆರ್‌ಎಲ್ : www.jsspda.org

## 1. ಜೆಎಸ್‌ಎಸ್ ಮಹಾವಿದ್ಯಾಪೀಠದ ಬಗ್ಗೆ?

ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠವು ಕಳೆದ 5 ದಶಕಗಳಿಂದ ಶೈಕ್ಷಣಿಕ ಸಂಸ್ಥೆಗಳನ್ನು ರಾಷ್ಟ್ರೀಯ ಮತ್ತು ಅಂತರಾಷ್ಟ್ರೀಯ ಮಟ್ಟದಲ್ಲಿ ಸ್ಥಾಪಿಸಿರುವ ಸಂಸ್ಥೆಯಾಗಿರುತ್ತದೆ. ಈ ಸಂಸ್ಥೆಯು ಸುಮಾರು 350ಕ್ಕಿಂತಲೂ ಹೆಚ್ಚು ಶೈಕ್ಷಣಿಕ ಸಂಸ್ಥೆಗಳನ್ನು ಹೊಂದಿರುತ್ತದೆ. ಹಾಗೂ ಸಂಸ್ಥೆಯಲ್ಲಿ ಕಲೆ, ವಿಜ್ಞಾನ, ವಾಣಿಜ್ಯ, ಕಾನೂನು, ಇಂಜಿನಿಯರಿಂಗ್, ಆರೋಗ್ಯವಿಜ್ಞಾನ, ಸಾಮಾನ್ಯ ಶಿಕ್ಷಣ, ಕೃಷಿ ಹೀಗೆ ಮುಂತಾದ ಎಲ್ಲಾ ಕ್ಷೇತ್ರಗಳಲ್ಲಿಯೂ ತನ್ನ ಸೇವೆಯನ್ನು ವಿಸ್ತರಿಸಿದೆ.

## 2. ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಬಗ್ಗೆ?

ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಂಸ್ಥೆಯು ವಿಶೇಷಚೇತನ ವಿದ್ಯಾರ್ಥಿಗಳಿಗಾಗಿ ತಾಂತ್ರಿಕ ಶಿಕ್ಷಣವನ್ನು ನೀಡುವ ಉದ್ದೇಶದಿಂದ ಸ್ಥಾಪಿಸಲ್ಪಟ್ಟ ರಾಷ್ಟ್ರದ ಪ್ರಪ್ರಥಮ ಸಂಸ್ಥೆಯಾಗಿದ್ದು, ಕರ್ನಾಟಕ ಸರ್ಕಾರದ ಅನುದಾನಕ್ಕೆ ಒಳಪಟ್ಟಿರುತ್ತದೆ. ಈ ಸಂಸ್ಥೆಯಲ್ಲಿ ಮೂರು ವರ್ಷಗಳ ಡಿಪ್ಲೋಮ ಕೋರ್ಸ್‌ಗಳನ್ನು ವಿವಿಧ ವಿಷಯಗಳಲ್ಲಿ ಬೋಧಿಸಲಾಗುತ್ತಿದೆ.

## 3. ಜೆಎಸ್‌ಎಸ್ ಪಿಡಿಎ ಅಂದರೆ?

ಜೆಎಸ್‌ಎಸ್ ಪಿಡಿಎ ಇದರ ವಿಸ್ತೃತ ರೂಪವು ಜೆಎಸ್‌ಎಸ್ ಪಾಲಿಟೆಕ್ನಿಕ್ ಫಾರ್ ದಿ ಡಿಫರೆಂಟ್ಲಿ ಏಬಲ್ಡ್ (ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್).

## 4. ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಎಲ್ಲಿದೆ? ಮತ್ತು ಹೇಗೆ ತಲುಪುವುದು?

ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸಾಂಸ್ಕೃತಿಕ ನಗರಿ ಮೈಸೂರಿನಿಂದ ಪಶ್ಚಿಮ ದಿಕ್ಕಿಗೆ ಮಾನಸ ಗಂಗೋತ್ರಿ (ಮಾನಸ ಗಂಗೋತ್ರಿಯ ಸ್ನಾತಕೋತ್ತರ ಅಧ್ಯಯನ ವಿಭಾಗಗಳ ಆವರಣ) ಯ, ಪ್ರೀಮಿಯರ್ ಸ್ಟುಡಿಯೋ, ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆಗಳ ಹತ್ತಿರದಲ್ಲಿದೆ. ಇದು ನಗರ ಬಸ್ ನಿಲ್ದಾಣದಿಂದ ಸುಮಾರು 6 ಕಿ.ಮಿ. ಹಾಗೂ ರೈಲ್ವೆ ನಿಲ್ದಾಣದಿಂದ ಸುಮಾರು 4 ಕಿ.ಮಿ. ಅಂತರದಲ್ಲಿದೆ. ಅಲ್ಲದೇ, ರಾಜಧಾನಿ ಬೆಂಗಳೂರಿನಿಂದ ಸುಮಾರು 150 ಕಿ.ಮಿ. ದೂರದಲ್ಲಿದೆ.

## 5. ಮೈಸೂರು ನಗರದ ಬಗ್ಗೆ.

ಮೈಸೂರು ಮಹಾರಾಜರ ಆಳ್ವಿಕೆಗೆ ಒಳಪಟ್ಟಿದ್ದ ಮೈಸೂರು ನಗರವು ಪಾರಂಪರಿಕ ನಗರ ಎಂಬ ಖ್ಯಾತಿಯನ್ನು ಹೊಂದಿದೆ. ಇದು ಇಲ್ಲಿಯ ಹಿತಕರ ವಾಯುಗುಣದ ಪರಿಣಾಮವಾಗಿ ನಿವೃತ್ತಿದಾರರ ಸ್ವರ್ಗದ ನಗರ ಎನಿಸಿದೆ. ನಗರವು ಚಳಿಗಾಲದಲ್ಲಿ $18^{o}C-21^{o}C$ ವರೆಗೆ ಬೇಸಿಗೆ ಕಾಲದಲ್ಲಿ ಗರಿಷ್ಠ $36^{o}C$ ವರೆಗೆ ಉಷ್ಣಾಂಶವನ್ನು ಹೊಂದಿರುತ್ತದೆ. ಈ ವಾತಾವರಣವು ಶಿಕ್ಷಣದ ಅಭಿವೃದ್ಧಿಗೆ, ಕಲಿಕೆಗೆ ಹಿತಕರವಾಗಿರುತ್ತದೆ. ಆಧುನಿಕ ಜೀವನ ಶೈಲಿಯಲ್ಲಿ ನಗರವು "ಬಿ" ವಲಯದಲ್ಲಿದೆ.

## 6. ವಿಶೇಷಚೇತನರ ಪಾಲಿಟೆಕ್ನಿಕ್‌ನಲ್ಲಿ ಲಭ್ಯವಿರುವ ಕೋರ್ಸ್‌ಗಳು?

ಪ್ರಸ್ತುತ ಪಾಲಿಟೆಕ್ನಿಕ್‌ನಲ್ಲಿ 1) ಆರ್ಕಿಟೆಕ್ಚರ್ (ಎಆರ್) 2) ಕಮರ್ಷಿಯಲ್ ಪ್ರಾಕ್ಟೀಸ್ (ಸಿಪಿ) 3) ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ (ಸಿಎಸ್) 4) ಜ್ಯುಯಲರಿ ಡಿಸೈನ್ & ಟೆಕ್ನಾಲಜಿ (ಜೆಡಿ) 5) ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್ (ಇಸಿ) 6) ಕಂಪ್ಯೂಟರ್ ಅಪ್ಲಿಕೇಷನ್ಸ್ ಫಾರ್ ದಿ ವಿಶ್ಯೂಯಲಿ ಇಂಪೇರ್ಡ್ (ಸಿಎ) ಎಂಬ ಕೋರ್ಸ್‌ಗಳಿದ್ದು, ಇವು 3 ವರ್ಷಗಳ (6 ಸೆಮಿಸ್ಟರ್‌ಗಳು) ಅವಧಿಯದ್ದಾಗಿರುತ್ತದೆ. ಇವುಗಳಲ್ಲಿ ಮೊದಲ 3 ಕೋರ್ಸ್‌ಗಳು ಕರ್ನಾಟಕ ಸರ್ಕಾರದ ಅನುದಾನಕ್ಕೆ ಒಳಪಟ್ಟಿದ್ದು, ಉಳಿದ 3 ಕೋರ್ಸ್‌ಗಳು ಅನುದಾನ ರಹಿತ ಕೋರ್ಸ್‌ಗಳಾಗಿರುತ್ತದೆ. ಈ ಎಲ್ಲಾ ಕೋರ್ಸ್‌ಗಳು ಕರ್ನಾಟಕ ಸರ್ಕಾರ ಮತ್ತು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಇವರಿಂದ ಅನುಮೋದಿಸಲ್ಪಟ್ಟಿದೆ.

## 7. ಬೋಧನ ಮಾಧ್ಯಮ

ಎಲ್ಲಾ ಕೋರ್ಸ್‌ಗಳ ಬೋಧನ ಮಾಧ್ಯಮವು ಆಂಗ್ಲ ಭಾಷೆಯಲ್ಲಿರುತ್ತದೆ.

## 8. ಪ್ರತಿವರ್ಷದ ಪ್ರವೇಶಾತಿಯು ಯಾವಾಗ ಪ್ರಾರಂಭವಾಗುತ್ತದೆ?

ಪ್ರತಿವರ್ಷದ ಪ್ರವೇಶಾತಿ ಪ್ರಕ್ರಿಯೆಯು ಜೂನ್ – ಜುಲೈ ಮಾಹೆಯಲ್ಲಿ ಜರುಗುತ್ತದೆ.

**9. ಪ್ರವೇಶಾತಿ ಅರ್ಜಿ ಸಲ್ಲಿಸುವುದು ಹೇಗೆ?**

ಪ್ರವೇಶಾತಿ ಸಂಬಂಧಿಸಿದಂತೆ ಕರ್ನಾಟಕ ಸರ್ಕಾರ ಹಾಗೂ ಇತರೆ ರಾಜ್ಯ ಸರ್ಕಾರಗಳ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯ ಫಲಿತಾಂಶವು ಪ್ರಕಟವಾದ ನಂತರ ಅಂದರೆ, ಮೇ ಮಾಹೆಯಿಂದ ಜೂನ್ ಮಾಹೆಯವರೆಗೆ ಪ್ರವೇಶಾತಿ ಅರ್ಜಿಗಳನ್ನು ನೀಡಲಾಗುತ್ತದೆ. ಪ್ರವೇಶಾತಿ ಅರ್ಜಿಗಳನ್ನು ಪಾಲಿಟೆಕ್ನಿಕ್‌ನ ವೆಬ್‌ಸೈಟ್‌ನಿಂದ www.jsspda.org ಡೌನ್‌ಲೋಡ್ ಮಾಡಿಕೊಳ್ಳಬಹುದು. ಅರ್ಜಿ ಶುಲ್ಕ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಹಾಗೂ ಪ್ರವರ್ಗ–1 ರ ವಿದ್ಯಾರ್ಥಿಗಳಿಗೆ ರೂ. 50/– ಮತ್ತು ಇತರೆ ವಿದ್ಯಾರ್ಥಿಗಳಿಗೆ ರೂ. 100/– ಆಗಿರುತ್ತದೆ.

**10. ಕೋರ್ಸ್ ಅವಧಿ?**

ಕೋರ್ಸ್ ಅವಧಿಯು 3 ವರ್ಷಗಳಾಗಿರುತ್ತದೆ (6 ಸೆಮಿಸ್ಟರ್‌ಗಳು)

**11. ಕೋರ್ಸ್‌ಗಳು ಸರ್ಕಾರದಿಂದ ಅನುಮೋದಿಸಲ್ಪಟ್ಟಿವಿಯೆ?**

ಹೌದು. ಎಲ್ಲಾ ಕೋರ್ಸ್‌ಗಳು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಪರಿಷತ್, ನವದೆಹಲಿ ಹಾಗೂ ಕರ್ನಾಟಕ ತಾಂತ್ರಿಕ ಶಿಕ್ಷಣ ಇಲಾಖೆಯ ತಾಂತ್ರಿಕ ಪರೀಕ್ಷಾ ಮಂಡಳಿಯಿಂದ ಅನುಮೋದಿಸಲ್ಪಟ್ಟಿವೆ.

**12. ಪ್ರವೇಶಾತಿಗೆ ಇರಬೇಕಾದ ಅರ್ಹತೆಗಳೇನು?**

ಕರ್ನಾಟಕದ ಸರ್ಕಾರದ ಎಸ್‌ಎಸ್‌ಎಲ್‌ಸಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು. ಮತ್ತು ದೈಹಿಕ ಅಂಗವೈಕಲ್ಯವುಳ್ಳ / ಶ್ರವಣದೋಷವುಳ್ಳ / ಭಾಗಶಃ ಅಂಧತ್ವವುಳ್ಳ / ಪೂರ್ಣ ಅಂಧತ್ವವುಳ್ಳ ಅಭ್ಯರ್ಥಿಗಳು ಪ್ರವೇಶಾತಿಗೆ ಅರ್ಹತೆ ಹೊಂದಿರುತ್ತಾರೆ.

**13. ಪ್ರವೇಶಾತಿಯು ರಾಷ್ಟ್ರಮಟ್ಟದಲ್ಲಿ ಜರುಗುತ್ತದೆಯೇ?**

ºÉದು. ಪ್ರವೇಶಾತಿಯು ರಾಷ್ಟ್ರಮಟ್ಟದಲ್ಲಿ ನಡೆಯುತ್ತದೆ. ರಾಷ್ಟ್ರದ ಯಾವುದೇ ರಾಜ್ಯದ ವಿದ್ಯಾರ್ಥಿಗಳು ಪ್ರವೇಶಾತಿಗೆ ಅರ್ಹರು. ಆದಾಗ್ಯೂ 60% ರಷ್ಟು ಸ್ಥಾನಗಳನ್ನು ಕರ್ನಾಟಕದ ವಿದ್ಯಾರ್ಥಿಗಳಿಗೆ (ಶೈಕ್ಷಣಿಕ ಅರ್ಹತೆ ಹಾಗೂ ಸರ್ಕಾರದ ಮೀಸಲಾತಿ ಅನ್ವಯ). ಮತ್ತು 40% ರಷ್ಟು ಸ್ಥಾನಗಳನ್ನು ಹೊರ ರಾಜ್ಯದ ವಿದ್ಯಾರ್ಥಿಗಳಿಗೆ ಮೀಸಲಿರಿಸಿದೆ.

**14. ಪರೀಕ್ಷಾ ಸಮಯದಲ್ಲಿ ದೊರೆಯಬಹುದಾದ ಹೆಚ್ಚುವರಿ ಸಹಾಯ?**

ಪರೀಕ್ಷೆ ಬರೆಯಲು ಕಷ್ಟವೆನಿಸುವ ವಿದ್ಯಾರ್ಥಿಗಳಿಗೆ ಪ್ರತಿ ಗಂಟೆಗೆ 20 ನಿಮಿಷಗಳ ಹೆಚ್ಚುವರಿ ಸಮಯವನ್ನು ನೀಡಲಾಗುತ್ತದೆ. ಜೊತೆಗೆ ಅಂಧ ವಿದ್ಯಾರ್ಥಿಗಳಿಗೆ ಮತ್ತು ಅವಶ್ಯಕವೆನಿಸಿದ ದೈಹಿಕ ವೈಕಲ್ಯವುಳ್ಳ ವಿದ್ಯಾರ್ಥಿಗಳಿಗೂ ಸಹ ಪರೀಕ್ಷೆ ಬರೆಯಲು ಪರೀಕ್ಷಾ ಸಹಾಯಕರನ್ನು ನಿಯಮಾನುಸಾರ ಒದಗಿಸಲಾಗುತ್ತದೆ.

**15. ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಸೌಲಭ್ಯಗಳು ಇವೆಯೆ?**

ºÉದು. ಇದೇ ಆವರಣದಲ್ಲಿ ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಪ್ರತ್ಯೇಕವಾದ ವಸತಿ ಸೌಲಭ್ಯವಿರುತ್ತದೆ. ಪ್ರವೇಶಾತಿ ಸಂದರ್ಭದಲ್ಲಿ ವಿದ್ಯಾರ್ಥಿ ನಿಲಯದ ಅವಶ್ಯಕತೆಯಿರುವ ವಿದ್ಯಾರ್ಥಿಗಳು ಪ್ರತ್ಯೇಕವಾಗಿ ಅರ್ಜಿಗಳನ್ನು ಸಲ್ಲಿಸಬೇಕು.

**16. ವಿದ್ಯಾರ್ಥಿನಿಲಯದಲ್ಲಿ ಸರಬರಾಜು ಮಾಡುವ ಆಹಾರ?**

ವಿದ್ಯಾರ್ಥಿನಿಲಯದಲ್ಲಿ ದಕ್ಷಿಣ ಭಾರತ ಸಸ್ಯಹಾರಿ ಆಹಾರವನ್ನು ಮಾತ್ರ ಸರಬರಾಜು ಮಾಡಲಾಗತ್ತದೆ. ಮಾಂಸಹಾರಿ ಆಹಾರವನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ.

**17. ಆವರಣದಲ್ಲಿ ದೊರೆಯಬಹುದಾದ ಇತರೆ ಸೌಲಭ್ಯಗಳು?**

ಸಂಸ್ಥೆಯ ಆವರಣದಲ್ಲಿ ವಿದ್ಯಾರ್ಥಿಗಳ ಅನುಕೂಲಕ್ಕಾಗಿ ಬ್ಯಾಂಕಿಂಗ್, ಉಪಹಾರ ಗೃಹ, ಒಳಾಂಗಣ ಮತ್ತು ಹೊರಾಂಗಣ ಕ್ರೀಡಾಂಗಣ, ಆರೋಗ್ಯ ಕೇಂದ್ರ, ಎಟಿಎಂ, ಲೇಖನ ಸಾಮಾಗ್ರಿಗಳು ಇದೇ ಆವರಣದಲ್ಲಿ ದೊರೆಯುತ್ತದೆ. ಇವುಗಳಲ್ಲದೇ, ಆಪ್ತ ಸಮಾಲೋಚನ ಸೇವೆ, ಸನ್ನೆಗಳ ಮೂಲಕ ಭಾಷಾ ಸಂವಹನ, ಉದ್ಯೋಗ ಮಾಹಿತಿ ತರಬೇತಿ ಸೇವೆ, ಕ್ಷೇತ್ರ ಕಾರ್ಯ, ರಾಷ್ಟ್ರೀಯ ಸೇವಾ ಯೋಜನೆ ಚಟುವಟಿಕೆಗಳು ಮುಂತಾದವುಗಳ ಸೇವೆ ಲಭ್ಯವಿರುತ್ತದೆ. ವಿದ್ಯಾರ್ಥಿಗಳಿಗೆ ವಿಶೇಷ ಸಂಪನ್ಮೂಲ ವ್ಯಕ್ತಿಗಳಿಂದ ಉಪನ್ಯಾಸ ಕಾರ್ಯಕ್ರಮ ಏರ್ಪಡಿಸಲಾಗುತ್ತದೆ. ಸಾಂಸ್ಕೃತಿಕ ಕಾರ್ಯಕ್ರಮಗಳು ಹಿರಿಯ ವಿದ್ಯಾರ್ಥಿಗಳ ಸಮಾಗಮ, ಸಾಧಕರ ದಿನಾಚರಣೆ, ಕ್ರೀಡಾ ಚಟುವಟಿಕಗಳು, ವಾರ್ಷಿಕ ದಿನಾಚರಣೆ ಮತ್ತು ವಿದ್ಯಾರ್ಥಿನಿಲಯದ ದಿನಾಚರಣೆಗಳನ್ನು ಪ್ರತಿವರ್ಷವು ಆಚರಿಸಲಾಗುತ್ತದೆ.

## 18. ಬಡ ವಿದ್ಯಾರ್ಥಿಗಳಿಗೆ ಕಲ್ಪಿಸಿಕೊಡಬಹುದಾದ ನೆರವು?

ಸರ್ಕಾರದ ನಿಯಮಾನುಸಾರ ಅರ್ಹ ವಿದ್ಯಾರ್ಥಿಗಳಿಗೆ ವಿವಿಧ ಯೋಜನೆಗಳಡಿಯಲ್ಲಿ ವಿದ್ಯಾರ್ಥಿ ವೇತನವನ್ನು ಕಲ್ಪಿಸಿಕೊಡಲಾಗುತ್ತದೆ. ಇದರ ಜೊತೆಗೆ ಹಲವು ಪ್ರಾಯೋಜಕರ ಮೂಲಕ ಅತ್ಯವಶಕವೆನಿಸಿದ ವಿದ್ಯಾರ್ಥಿಗಳಿಗೂ ಸಹ ಹಣಕಾಸಿನ ನೆರವು ಹಾಗು ಇತರೆ ಸೌಲಭ್ಯಗಳನ್ನು ಕಲ್ಪಿಸಿಕೊಡಲಾಗುತ್ತದೆ.

## 19. ಶೈಕ್ಷಣಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ದೊರೆಯಬಹುದಾದ ಸಹಾಯ?

ಪ್ರಾರಂಭದಲ್ಲಿ ಪ್ರವೇಶಾತಿ ಪಡೆದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಅವರ ಶೈಕ್ಷಣಿಕ ಅರಿವಿನ ಮೇಲೆ ಸಂವಹನ ಕೌಶಲ್ಯವನ್ನು ಕಲಿಸಿಕೊಡಲಾಗುತ್ತದೆ. ವಿಶೇಷವಾಗಿ ಆಂಗ್ಲಭಾಷೆ, ಗಣಿತ, ಸಂವಹನ, ಮುಂತಾದವುಗಳಲ್ಲಿ ಶೈಕ್ಷಣಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿಗಳನ್ನು ಏರ್ಪಡಿಸಲಾಗುತ್ತದೆ.

## 20. ಜೆಎಸ್ಎಸ್ ವಿಶೇಷಚೇತನರ ಪಾಲಿಟೆಕ್ನಿಕ್ ಸ್ವಾಯತ್ತ ಸಂಸ್ಥೆಯೇ?

ಹೌದು. ಸಂಸ್ಥೆಯು ತನ್ನದೇ ಆದ ಪ್ರವೇಶಾತಿ ಪ್ರಕ್ರಿಯೆ, ಪಠ್ಯಕ್ರಮ, ಪರೀಕ್ಷಾ ಪದ್ಧತಿ ವ್ಯವಸ್ಥೆಯನ್ನು ಅಳವಡಿಸಿಕೊಂಡಿದೆ. ಕರ್ನಾಟಕ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿಯ ನಿಯಮಾನುಸಾರ, ಮಾರ್ಗಸೂಚಿ ಅನ್ವಯ ಪಾಲಿಟೆಕ್ನಿಕ್ ಹಂತದಲ್ಲಿಯೇ ಪರೀಕ್ಷಾ ಪದ್ಧತಿಯನ್ನು ಅಳವಡಿಸಿಕೊಂಡಿದೆ.

## 21. ಪರೀಕ್ಷೆ ಪ್ರಾರಂಭವಾಗುವ ಮಾಹೆ?

ಪರೀಕ್ಷೆಯು ವರ್ಷದಲ್ಲಿ ಎರಡು ಬಾರಿ ಜರುಗುತ್ತದೆ. ಮೊದಲ ಅವಧಿಯ (6 ತಿಂಗಳ) ಪರೀಕ್ಷೆಯು ಪ್ರತಿವರ್ಷದ ಮೇ–ಜೂನ್ ಮಾಹೆಯಲ್ಲಿ ಮತ್ತು ಎರಡನೇ ಅವಧಿಯ ಪರೀಕ್ಷೆಯು ಪ್ರತಿವರ್ಷದ ನವೆಂಬರ್–ಡಿಸೆಂಬರ್ ಮಾಹೆಯಲ್ಲಿ ಜರುಗುತ್ತದೆ.

## 22. ಡಿಪ್ಲೋಮ ಕೋರ್ಸ್‌ಗಳನ್ನು ಪಡೆಯಲು ಬೇಕಾದ ಅರ್ಹತೆ?

ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್ ಮತ್ತು ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ಸ್ ಕೋರ್ಸ್‌ಗಳಿಗೆ ಮೂಲ ಶಿಕ್ಷಣವಾಗಿ ಗಣಿತ, ವಿಜ್ಞಾನ ಮತ್ತು ಇಂಗ್ಲಿಷ್ ಕಲಿಕೆಯ ಅಗತ್ಯವಾಗಿರುತ್ತದೆ. ಆರ್ಕಿಟೆಕ್ಚರ್ ಮತ್ತು ಜ್ಯೂಯಲರಿ ಡಿಸೈನ್ ಟೆಕ್ನಾಲಜಿ ಕೋರ್ಸ್‌ಗಳಿಗೆ ಗಣಿತ ಮತ್ತು ಇಂಗ್ಲಿಷ್‌ಗಳ ಜೊತೆಗೆ ಡಿಸೈನ್ ಮತ್ತು ಡ್ರಾಯಿಂಗ್‌ಗಳಲ್ಲಿ ಆಸಕ್ತಿ ಇರಬೇಕು. ಕಮರ್ಷಿಯಲ್ ಪ್ರಾಕ್ಟೀಸ್ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ ಫಾರ್ ದಿ ವಿಶ್ಯೂಯಲಿ ಇಂಪೇರ್ಡ್ ಕೋರ್ಸ್‌ಗಳಿಗೆ ಇಂಗ್ಲಿಷ್ ಜ್ಞಾನದ ಜೊತೆಗೆ ವಾಣಿಜ್ಯ ವ್ಯವಹಾರಕ್ಕೆ ಸಂಬಂಧಿಸಿದ ವಿಷಯಗಳ ಕಲಿಕೆ ಅವಶ್ಯಕವಾಗಿರುತ್ತದೆ.

## 23. ಗಣಿತ, ಇಂಗ್ಲಿಷ್ ಮತ್ತು ಸಂಪರ್ಕ ವಿಷಯಗಳಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಒದಗಿಸಬಹುದಾದ ಶೈಕ್ಷಣಿಕ ನೆರವು?

ಈ ವಿಷಯಗಳ ಕಲಿಕೆಯಲ್ಲಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ಅವರ ಅಗತ್ಯಕ್ಕೆ ಅನುಗುಣವಾಗಿ ಹೆಚ್ಚುವರಿ ಹಾಗೂ ವಿಶೇಷ ತರಬೇತಿಗಳನ್ನು ಆಯೋಜಿಸಲಾಗುತ್ತದೆ.

## 24. ನನಗೆ ಯಾವ ಕೋರ್ಸ್ ಸೂಕ್ತ (ಪ್ರತಿ ಕೋರ್ಸ್‌ನ ಸಂಕ್ಷಿಪ್ತ ವಿವರ)?

ವಿದ್ಯಾರ್ಥಿಯು ತನ್ನ ಸ್ವಇಚ್ಛೆ ಮೇರೆಗೆ ತನ್ನ ಗುರಿ ತಲುಪಲು ಕೋರ್ಸನ್ನು ಆಯ್ಕೆ ಮಾಡಿಕೊಳ್ಳಬಹುದು.

- ಗಣಕ ಯಂತ್ರಕ್ಕೆ ಸಂಬಂಧಿಸಿದ ಸಾಫ್ಟ್‌ವೇರ್ ಮತ್ತು ಹಾರ್ಡ್‌ವೇರ್‌ಗಳಿಗೆ ವಿಷಯಗಳಲ್ಲಿ ಆಸಕ್ತಿವುಳ್ಳವರು ಕಂಪ್ಯೂಟರ್ ಸೈನ್ಸ್ ಕೋರ್ಸನ್ನು ಆಯ್ಕೆ ಮಾಡಬಹುದು.
- ಆರ್ಕಿಟೆಕ್ಚರ್ (ವಾಸ್ತು ಶಿಲ್ಪ) ವಿಷಯದಲ್ಲಿ ಆಸಕ್ತಿ ಹೊಂದಿರುವವರು, ಈ ಕ್ಷೇತ್ರಕ್ಕೆ ಬೇಕಾದ ಡಿಸೈನ್ ಮತ್ತು ಕಟ್ಟಡ ತಯಾರಿಕಾ ಯೋಜನೆಯ ಡ್ರಾಫ್ಟಿಂಗ್, ಮಾಡೆಲ್ ಮೇಕಿಂಗ್, ಮುಂತಾದವುಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ.
- ನಿಪುಣ ಎಲೆಕ್ಟ್ರಾನಿಕ್ ಟೆಕ್ನೀಷಿಯನ್ ಆಗಬಯಸುವವರಿಗೆ, ಈ ಕ್ಷೇತ್ರದಲ್ಲಿ ಪರಿಣತಿ ಪಡೆಯಲು ಅಗತ್ಯವಾದ ಎಲ್ಲಾ ತಾಂತ್ರಿಕ ಕೌಶಲ್ಯಗಳನ್ನು ನೀಡಲಾಗುತ್ತದೆ.
- ವಾಣಿಜ್ಯ ವ್ಯವಹಾರದಲ್ಲಿ ಆಸಕ್ತಿ ಹೊಂದಿದಲ್ಲಿ, ಇವರು ಕಮರ್ಷಿಯಲ್ ಪ್ರಾಕ್ಟೀಸ್ ಕೋರ್ಸನ್ನು ಆಯ್ಕೆ ಮಾಡಿಕೊಂಡಲ್ಲಿ ಲೆಕ್ಕ ನಿರ್ವಹಣೆ (ಕಂಪ್ಯೂಟರ್ ಜ್ಞಾನದ ಸಹಿತ), ಶೀಘ್ರಲಿಪಿ, ತೆರಿಗೆ ನಿರ್ವಹಣೆ, ಆಡಳಿತ ನಿರ್ವಹಣೆ, ಬ್ಯಾಂಕಿಂಗ್ ಮತ್ತು ಹಣಕಾಸಿನ ನಿರ್ವಹಣೆ ಮುಂತಾದವುಗಳ ಬಗ್ಗೆ ತಿಳಿಸಿಕೊಡಲಾಗುತ್ತದೆ.

- ಚಿನ್ನಾಭರಣಗಳ ತಯಾರಿಕೆಯಲ್ಲಿ ಆಸಕ್ತಿ ಹೊದಿರುವವರು (ಪಾರಂಪರಿಕವಾಗಿ/ವೃತ್ತಿಯಲ್ಲಿರುವವರು), ಈ ಕೋರ್ಸ್ ಅನ್ನು ಆಯ್ಕೆಮಾಡಿಕೊಂಡಲ್ಲಿ ಹೊಸ ತಂತ್ರಜ್ಞಾನದೊಂದಿಗೆ ಕೌಶಲ್ಯವನ್ನು ನೀಡಲಾಗುವುದು.
- ಭಾಗಶಃ ಅಥವಾ ಪೂರ್ಣ ಅಂಧತ್ವ ಹೊಂದಿರುವ ವಿದ್ಯಾರ್ಥಿಗಳು ಬ್ಯಾಂಕಿಂಗ್, ಹಣಕಾಸು, ವಿಮೆ, ಸಮೂಹ ಮಾಧ್ಯಮ, ಕಾಲ್ ಸೆಂಟರ್, ಮುಂತಾದ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಲು ಆಸಕ್ತಿ ಹೊಂದಿದಲ್ಲಿ ಇವರಿಗಾಗಿಯೇ ವಿಶೇಷವಾಗಿ ಇರುವ ಕಂಪ್ಯೂಟರ್ ಅಪ್ಲಿಕೇಷನ್ ಫಾರ್ ದಿ ವಿಶ್ಯುಯಲಿ ಇಂಪೇರ್ಡ್ ಕೋರ್ಸ್ ಅನ್ನು ಆಯ್ಕೆ ಮಾಡಿಕೊಳ್ಳಬಹುದು.

## 25. ವಿದ್ಯಾರ್ಥಿಗಳು ಪಡೆಯಬಹುದಾದ ಇತರೆ ಹೆಚ್ಚುವರಿ ಜ್ಞಾನ?

ವಿದ್ಯಾರ್ಥಿಗಳು ತಮ್ಮ ಸಾಮಾನ್ಯ ಶೈಕ್ಷಣಿಕ ಚಟುವಟಿಕೆಗಳ ಜೊತೆಗೆ ತಮ್ಮ ಜ್ಞಾನವನ್ನು ವೃದ್ಧಿಗೊಳಿಸುವ ಸಲುವಾಗಿ, ಕೈಗಾರಿಕೆ / ಉದ್ದಿಮೆಗಳು / ಕ್ಷೇತ್ರ ಭೇಟಿ / ಕಾರ್ಯಗಾರಗಳು ಮತ್ತು ಸೆಮಿನಾರ್ಸ್, ವಸ್ತುಪ್ರದರ್ಶನಗಳಲ್ಲಿ ಭಾಗವಹಿಸುವಿಕೆ, ವೃತ್ತಿಪರ ಮಾರ್ಗದರ್ಶನ ಕಾರ್ಯಕ್ರಮಗಳು ಕೌಶಲ್ಯ ತರಬೇತಿಗಳು, ಮುಂತಾದವುಗಳನ್ನು ಆಯಾಯ ಕ್ಷೇತ್ರದ ಪರಿಣಿತರು, ವಿಶೇಷ ಸಂಪನ್ಮೂಲ ವ್ಯಕ್ತಿಗಳ ಮೂಲಕ ತರಬೇತಿಗಳನ್ನು ಆಯೋಜಿಸಲಾಗುತ್ತದೆ.

## 26. ಅಧ್ಯಯನ ಮತ್ತು ಪರಮಾರ್ಶನಕ್ಕಾಗಿ ಲಭ್ಯವಿರುವ ಸೌಲಭ್ಯಗಳು?

ಪಾಲಿಟೆಕ್ನಿಕ್‌ನಲ್ಲಿರುವ ಗ್ರಂಥಾಲಯವು ಎಲ್ಲಾ ಕೋರ್ಸ್‌ಗಳ ಎಲ್ಲಾ ವಿಷಯಗಳನ್ನೊಳಗೊಂಡಂತೆ, ಸುಮಾರು 10,000 ಕ್ಕಿಂತ ಹೆಚ್ಚು ಪುಸ್ತಕಗಳನ್ನು ಹೊಂದಿದೆ. ಅಲ್ಲದೇ, ಹಲವು ವಿಶೇಷ ನಿಯತಕಾಲಿಕೆಗಳು ವೃತ್ತ ಪತ್ರಿಕೆಗಳನ್ನು ಹೊಂದಿದೆ. ಜೊತೆಗೆ ಅಂತರ್ಜಾಲ ವ್ಯವಸ್ಥೆಯನ್ನು ಹೊಂದಿದೆ.

## 27. ಸಂಸ್ಥೆಯಲ್ಲಿ ದೊರೆಯಬಹುದಾದ ಸಹಪಠ್ಯ ಚಟುವಟಿಕೆಗಳು?

ವಿವಿಧ ಸಂಸ್ಥೆಗಳು ಆಯೋಜಿಸುವ ಹಲವಾರು ಸಹಪಠ್ಯ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಭಾಗವಹಿಸಲು ಈ ಸಂಸ್ಥೆಯು ಪ್ರೋತ್ಸಾಹ ನೀಡುತ್ತದೆ. ಕ್ರೀಡಾ ಚಟುವಟಿಕೆಗಳಲ್ಲಿ ಹಲವು ವಿದ್ಯಾರ್ಥಿಗಳ ವೈಯಕ್ತಿಕ ಮತ್ತು ಸಮೂಹ ಕ್ರೀಡಾ ಸಮೂಹ ಸ್ಪರ್ಧೆಗಳಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸಿಕೊಡಲಾಗುತ್ತದೆ. ಅಲ್ಲದೇ, ಜಿಮ್‌ಖಾನ ಮತ್ತು ಹೈಡ್ರೋಥೆರಪಿಪೂಲ್ ಸಹ ಇದ್ದು, ವಿದ್ಯಾರ್ಥಿಗಳು ತಮ್ಮ ಅವಶ್ಯಕತೆಗನುಗುಣವಾಗಿ ಉಪಯೋಗಿಸಿಕೊಳ್ಳಬಹುದಾಗಿದೆ.

## 28. ಪರೀಕ್ಷೆ ತೆಗೆದುಕೊಳ್ಳಲು ಬೇಕಾದ ಅರ್ಹತೆ / ನಿಯಮಗಳು?

ಪ್ರತಿ ಪರೀಕ್ಷೆಗೆ ಹಾಜರಾಗುವ ವಿದ್ಯಾರ್ಥಿಯು ಕನಿಷ್ಠ 75% ರಷ್ಟು ಹಾಜರಾತಿಯನ್ನು ಕಡ್ಡಾಯವಾಗಿ ಹೊಂದಿರಬೇಕು. ಧೀರ್ಘಾವಧಿ ಗೈರು ಹಾಜರಿ ಸಂದರ್ಭದಲ್ಲಿ ಅಧಿಕೃತ ದಾಖಲಾತಿಗಳನ್ನು ಸಲ್ಲಿಸಬೇಕು. 60% ಕ್ಕಿಂತ ಕಡಿಮೆ ಇರುವ ವಿದ್ಯಾರ್ಥಿಗಳು ಪರೀಕ್ಷೆ ತೆಗೆದುಕೊಳ್ಳಲು ಅವಕಾಶವಿರುವುದಿಲ್ಲ. ಆಯಾಯ ತರಗತಿಗಳಲ್ಲಿ ಹಾಜರಾತಿಯನ್ನು ನಿರ್ವಹಿಸಲಾಗುತ್ತದೆ. ಪೋಷಕರು ತಮ್ಮ ಮಕ್ಕಳ ಹಾಜರಾತಿ ಬಗ್ಗೆ ನಿರಂತರವಾಗಿ ಗಮನ ಹರಿಸುವುದು.

## 29. ವಿದ್ಯಾರ್ಥಿಗಳು ಕೆಲವು ವಿಷಯಗಳಲ್ಲಿ ಅನುತ್ತೀರ್ಣರಾದರೆ?

ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಅನುತ್ತೀರ್ಣರಾದಲ್ಲಿ ಮುಂದಿನ ಸೆಮಿಸ್ಟರ್‌ನಲ್ಲಿ ಮರುಪರೀಕ್ಷೆಗಳನ್ನು ತೆಗೆದುಕೊಳ್ಳಲು ಅವಕಾಶವಿದೆ. ಪ್ರತಿ ವಿದ್ಯಾರ್ಥಿಗೂ ಪ್ರತಿ ವಿಷಯದಲ್ಲಿ ಉತ್ತೀರ್ಣರಾಗಲು 4 ಪ್ರಯತ್ನಗಳಲ್ಲಿ ಉತ್ತೀರ್ಣರಾಗಲು ಅವಕಾಶವಿರುತ್ತದೆ.

## 30. ವಿದ್ಯಾರ್ಥಿಗಳು ಮುಂದಿನ ತರಗತಿಗಳಿಗೆ ಪ್ರವೇಶಾತಿ ಪಡೆಯಲು ಬೇಕದ ಅರ್ಹತೆ?

ಪ್ರತಿ ವರ್ಷವು ಮುಂದಿನ ಶೈಕ್ಷಣಿಕ ವರ್ಷಕ್ಕೆ ಪ್ರವೇಶಾತಿ ಪಡೆಯಲು ಅವಶ್ಯಕವಾದ ಅರ್ಹತೆಯನ್ನು ಹೊಂದಿರಲೇಬೇಕು.

## 31. ಮುಂದಿನ ಸೆಮಿಸ್ಟರ್‌ಗೆ ಹೋಗಲು ಅವಶ್ಯಕವಾದ ಅರ್ಹತೆ?

ಬೆಸ ಸೆಮಿಸ್ಟರ್‌ನಿಂದ (ಆಡ್ ಸೆಮಿಸ್ಟರ್) ಸಮ ಸೆಮಿಸ್ಟರ್‌ಗೆ (ಈವನ್ ಸೆಮಿಸ್ಟರ್) ಪ್ರವೇಶಾತಿ ಪಡೆಯಲು ಅನುತ್ತೀರ್ಣತೆಗೆ ಯಾವುದೇ ಮಿತಿ ಇರುವುದಿಲ್ಲ. ಆದಾಗ್ಯೂ, 2ನೇ ವರ್ಷಕ್ಕೆ ಪ್ರವೇಶಾತಿ ಪಡೆಯಲು (3ನೇ ಸೆಮಿಸ್ಟರ್‌ಗೆ) 6 ವಿಷಯಗಳನ್ನು ಉಳಿಸಿಕೊಂಡಿರಬಹುದು ಮತ್ತು 3ನೇ ವರ್ಷಕ್ಕೆ ಪ್ರವೇಶಾತಿ ಪಡೆಯಲು (5ನೇ ಸೆಮಿಸ್ಟರ್‌ವರೆಗೆ) 4 ವಿಷಯಗಳನ್ನು ಉಳಿಸಿಕೊಂಡಿರಬಹುದು.

## 32. ಡಿಪ್ಲೋಮ ಪ್ರಮಾಣ ಪತ್ರವನ್ನು ವಿತರಿಸುವವರು ಯಾರು?

ಡಿಪ್ಲೋಮ ಕೋರ್ಸ್‌ನಲ್ಲಿ 3 ವರ್ಷಗಳಲ್ಲಿ ಓದಬೇಕಾದ ವಿಷಯಗಳಲ್ಲಿ ಸಂಪೂರ್ಣವಾಗಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಕರ್ನಾಟಕ ಸರ್ಕಾರದ ತಾಂತ್ರಿಕ ಶಿಕ್ಷಣ ಪರೀಕ್ಷಾ ಮಂಡಳಿ ವತಿಯಿಂದ ಪ್ರಮಾಣ ಪತ್ರವನ್ನು ವಿತರಿಸಲಾಗುತ್ತದೆ.

## 33. ಶ್ರವಣದೋಷವುಳ್ಳ ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳು?

ಈ ವಿದ್ಯಾರ್ಥಿಗಳಿಗೆ ಸಂಜ್ಞೆಗಳ ಮೂಲಕ ಭಾಷಾ ಸಂವಹನ ತರಬೇತಿ, ಭಾಷಾ ತರಬೇತಿ, ಆಪ್ತ ಸಮಾಲೋಚನೆ, ಶ್ರವ್ಯ-ದೃಶ್ಯ ಉಪಕರಣಗಳು ಹಾಗೂ ಸಾಮಗ್ರಿಗಳನ್ನು ಸಂಸ್ಥೆಯ ಗ್ರಂಥಾಲಯ ಮತ್ತು ಆಯಾಯ ವಿಭಾಗಗಳಲ್ಲಿ ವಿದ್ಯಾರ್ಥಿಗಳಿಗೆ ಒದಗಿಸಲಾಗುತ್ತದೆ.

## 34. ಭಾಗಶಃ ಮತ್ತು ಪೂರ್ಣ ಅಂಧತ್ವವುಳ್ಳ ವಿದ್ಯಾರ್ಥಿಗಳಿಗೆ ದೊರೆಯುವ ಸೌಲಭ್ಯಗಳು?

ಈ ವಿದ್ಯಾರ್ಥಿಗಳಿಗೆ ಬ್ರೈಲ್ ಲಿಪಿ, ಶ್ರವ್ಯ ಮಾಧ್ಯಮದ ಪುಸ್ತಕಗಳು, ಟಾಕಿಂಗ್ ಕ್ಯಾಲ್ಕುಲೇಟರ್, ಆಡಿಯೋ ಸಿಸ್ಟಮ್ಸ್, ಮುಂತಾದವುಗಳನ್ನು ಒದಗಿಸಲಾಗುತ್ತದೆ. ಷರತ್ತುಗಳಿಗೆ ಒಳಪಟ್ಟು ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವನ್ನು ಸಹ ಕಲ್ಪಿಸಿಕೊಡಲು ಪ್ರಯತ್ನಿಸಲಾಗತ್ತದೆ.

## 35. ವಿದ್ಯಾರ್ಥಿಗಳಿಗೆ ರಜಾವಧಿ?

ವಿದ್ಯಾರ್ಥಿಗಳಿಗೆ ಬೆಸ ಸೆಮಿಸ್ಟರ್ (ಆಡ್ ಸೆಮಿಸ್ಟರ್) ಅವಧಿಯಲ್ಲಿ ಯಾವುದೇ ರಜೆ ಇರುವುದಿಲ್ಲ. ಆದಾಗ್ಯೂ, ಸಮ ಸೆಮಿಸ್ಟರ್ (ಈವನ್ ಸೆಮಿಸ್ಟರ್) ಪರೀಕ್ಷೆ ಮುಗಿದ ನಂತರ ಎಲ್ಲಾ ವಿದ್ಯಾರ್ಥಿಗಳಿಗೆ ಒಂದು ತಿಂಗಳ ರಜೆಯನ್ನು ನೀಡಲಾಗುತ್ತದೆ.

## 36. ಸಂಸ್ಥೆಯ ವೆಬ್‌ಸೈಟ್ ಮಾಹಿತಿ?

www.jsspda.org. ಈ ವೆಬ್‌ಸೈಟ್ ಮುಖಾಂತರ ಸಂಸ್ಥೆ, ಎಲ್ಲಾ ವಿಭಾಗಗಳು ಹಾಗು ಇಲ್ಲಿ ದೊರೆಯಬಹುದಾದ ಎಲ್ಲಾ ಸೌಲಭ್ಯಗಳ ಬಗ್ಗೆ ಮಾಹಿತಿಯನ್ನು ಪಡೆಯಬಹುದಾಗಿದೆ.

## 37. ಯಾರನ್ನು ಸಂಪರ್ಕಿಸಬೇಕು?

ವಿದ್ಯಾರ್ಥಿಗಳು ಮತ್ತು ಪೋಷಕರು ಮಾಹಿತಿಗಾಗಿ ಸಂಸ್ಥೆಯ ಕೆಳಕಂಡ ದೂರವಾಣಿ, ಇ-ಮೇಲ್ ಅಥವಾ ನೇರವಾಗಿ ಸಂಪರ್ಕಿಸಬಹುದು.

**ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್**
**ಜೆಎಸ್‌ಎಸ್ ತಾಂತ್ರಿಕ ಶಿಕ್ಷಣ ಸಂಸ್ಥೆಗಳ ಸಮುಚ್ಛಯ**
**ಮಾನಸಗಂಗೋತ್ರಿ, ಮೈಸೂರು – 570 006, ಕರ್ನಾಟಕ**
**ದೂರವಾಣಿ ಸಂಖ್ಯೆ: 0821-2548315, 2548316**
**ಇ-ಮೇಲ್ : jsspda@gmail.com ಯುಆರ್‌ಎಲ್ : www.jsspda.org**

## ಕೋರ್ಸ್‌ಗಳ ಬಗ್ಗೆ ಮಾಹಿತಿ

## I. ಡಿಪ್ಲೋಮ ಇನ್ ಆರ್ಕಿಟೆಕ್ಚರ್

### 1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?

ಇದು ಡ್ರಾಫ್ಟಿಂಗ್‌ಗೆ ಸಂಬಂಧಿಸಿದ ಕೋರ್ಸ್ ಆಗಿರುತ್ತದೆ. ಇಲ್ಲಿ ವಿದ್ಯಾರ್ಥಿಗಳು ಕಟ್ಟಡದ ನಕ್ಷೆ ತಯಾರಿಕೆ (ಹಸ್ತಚಾಲಿತ ಮತ್ತು ಆಧುನಿಕ ತಂತ್ರಜ್ಞಾನದೊಂದಿಗೆ), ಕಟ್ಟಡ ಮಾದರಿ ತಯಾರಿಕೆ, ಅಂದಾಜು ಪಟ್ಟಿ ತಯಾರಿಕೆ, ಸ್ತರವಿನ್ಯಾಸದ ರಚನೆ, ಕಟ್ಟಡಗಳ ನಿರ್ವಹಣಾ ಸೇವೆ, ನಗರ ಯೋಜನೆ ತಯಾರಿಕೆ, ಮುಂತಾದವುಗಳ ಬಗ್ಗೆ ತರಬೇತಿಯನ್ನು ಪಡೆಯಬಹುದು.

### 2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?

ವಿಭಾಗವು ಉತ್ತಮ ಶೈಕ್ಷಣಿಕ ಅರ್ಹತೆ ಮತ್ತು ಅನುಭವವುಳ್ಳ ಸಿಬ್ಬಂದಿವರ್ಗವನ್ನು ಹೊಂದಿದ್ದು, ಒಳ್ಳೆಯ ತರಗತಿ ಕೊಠಡಿಗಳು, ಡ್ರಾಫ್ಟಿಂಗ್ ಸ್ಟುಡಿಯೋ, ಪ್ರಯೋಗಾಲಯಗಳನ್ನು ಹೊಂದಿದೆ. ವಿದ್ಯಾರ್ಥಿಗಳಿಗೆ ಕ್ಷೇತ್ರಾನುಭವದ ದೃಷ್ಟಿಯಿಂದ ವಿವಿಧ ವಿನ್ಯಾಸದಿಂದ ಕೂಡಿದ ಕಟ್ಟಡಗಳಿಗೆ ಭೇಟಿ ನೀಡಲು ಅನುಕೂಲ ಕಲ್ಪಿಸಿಕೊಡಲಾಗುತ್ತದೆ.

### 3. ಕೋರ್ಸ್ ಪೂರ್ಣಗೊಳಿಸಿದ ನಂತರ ಮುಂದೇನು ಮಾಡಬಹುದು?

ಈ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ವಾಸ್ತು ಶಿಲ್ಪ ಅಭಿಯಂತರರುಗಳಿಗೆ ಸಹಾಯಕರಾಗಿ ಅಥವಾ ವಾಸ್ತು ಶಿಲ್ಪಿಗಳು / ಸಂಘ ಸಂಸ್ಥೆಗಳಲ್ಲಿ / ಸರ್ಕಾರಿ ಕಛೇರಿಗಳಲ್ಲಿ ಸೇವೆ ಸಲ್ಲಿಸಬಹುದು. ಅಥವಾ ಉನ್ನತ ವ್ಯಾಸಂಗ ಕೈಗೊಳ್ಳಬಹುದು.

### 4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?

ವಿಭಾಗದಲ್ಲಿ ಉತ್ತೀರ್ಣರಾಗಿರುವ ಕೆಲವು ವಿದ್ಯಾರ್ಥಿಗಳು ಈ ಕೆಳಕಂಡ ಪ್ರತಿಷ್ಠಿತ ವಾಸ್ತು ಶಿಲ್ಪ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

1. ಮದನ್‌ಕುಮಾರ್, ಡಿಜಿಎಸ್ ಟೆಕ್ನಿಕಲ್ ಸರ್ವಿಸ್ ಪ್ರೈ. ಲಿ., ಬೆಂಗಳೂರು.
2. ಬಿ ಎನ್ ಮಧು, ಆರ್ಕಿಟೆಕ್ಚರಲ್ ಸರ್ವಿಸಸ್ ಪ್ರೈ. ಲಿ. ಬೆಂಗಳೂರು.
3. ನಿರಂಜನ್, ಆರ್ಕಿಟೆಕ್ಚರಲ್ ಕನ್ಸಲ್ಟೆಂಟ್ & 3ಡಿ ವಿಶ್ಯುಲೈಸರ್, ಮೈಸೂರು.
4. ಗಿರೀಶ್ ಎಸ್, ಅನು & ತಾರಾ ಅಸೋಸಿಯೇಟ್ಸ್, ಮೈಸೂರು.
5. ನರೇಂದ್ರ, ಐ/ಸಿ ಅಸಿಸ್ಟೆಂಟ್ ಡೈರೆಕ್ಟರ್, ಬೀದರ್
6. ಮಂಜುನಾಥ್ ದೇವಪ್ಪ ಪಾವರ್, ಮ್ಯಾಗ್ನಾಸಾಫ್ಟ್ ಕನ್ಸಲ್ಟಿಂಗ್ ಪ್ರೈ. ಲಿ. ಬೆಂಗಳೂರು.
7. ಚೇತನ್‌ಕುಮಾರ್ ಸುರ್ಕೋಡ್, ಸೋಲಾಪುರ್ಕರ್ ಅಸೋಸಿಯೇಟ್ಸ್, ಬೆಂಗಳೂರು.
8. ಸುಚಿತ್ರ, ಸ್ಟೀಲ್ ಡೈಮೆನ್ಷನ್ ಇಂಡಿಯಾ ಪ್ರೈ. ಲಿ., ಬೆಂಗಳೂರು
9. ಸೋಮಶೇಖರ್ ಎಂ ಎನ್, ಐಕ್ಯಾಡ್ ಇಂಜಿನಿಯರಿಂಗ್ ಪ್ರೈ. ಲಿ. ಮೈಸೂರು.
10. ಅರವಿಂದ್ ಎನ್, ಲ್ಯಾನ್‌ಸೈಟ್ ಲಾಜಿಸ್ಟಿಕ್ ಲಿ., ಬೆಂಗಳೂರು.
11. ಮಲ್ಲಿಕಾರ್ಜುನ್ ಕೋಲಾರ್, ಐಕ್ಯಾಡ್ ಇಂಜಿನಿಯರಿಂಗ್ ಪ್ರೈ. ಲಿ. ಮೈಸೂರು.
12. ಪ್ರವೀಣ ನಾಯಕ್ ಎಚ್, ಐಕ್ಯಾಡ್ ಇಂಜಿನಿಯರಿಂಗ್ ಪ್ರೈ. ಲಿ. ಮೈಸೂರು.
13. ಸೋಮೇಶ್ ಮುಲ್ಲೋಳ, ಐಕ್ಯಾಡ್ ಇಂಜಿನಿಯರಿಂಗ್ ಪ್ರೈ. ಲಿ. ಮೈಸೂರು.
14. ರಾಮಮೂರ್ತಿ ಆರ್, ಟೆಸ್ಕೋ ಹಿಂದೂಸ್ಥಾನ್, ಬೆಂಗಳೂರು

### 5. ಡಿಪ್ಲೋಮ ಪೂರ್ಣಗೊಳಿಸಿದ ನಂತರ ದೊರೆಯಬಹುದಾದ ಉದ್ಯೋಗವಕಾಶಗಳು?

ಆರ್ಕಿಟೆಕ್ಚರ್ ಅಸಿಸ್ಟೆಂಟ್ಸ್ / ಆರ್ಕಿಟೆಕ್ಚರಲ್ ಡ್ರಾಫ್ಟ್‌ಮೆನ್ / ಕಿರಿಯ ನಗರ ಯೋಜನಾ ತಯಾರಕರು / ಫ್ರೀಲ್ಯಾನ್ಸ್ ಕ್ಯಾಡ್ ಡ್ರಾಫ್ಟ್ಸ್‌ಮೆನ್ / ಕಟ್ಟಡ ನಿರ್ಮಾಣಗಳ ಮೇಲ್ವಿಚಾರಕರು, ಮುಂತಾದ ಹುದ್ದೆಗಳನ್ನು ಪಡೆಯಬಹುದು.

### 6. ಉದ್ಯೋಗದ ನಂತರ ಪಡೆಯಬಹುದಾದ ವೇತನ?

ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿ ಒಂದು ವರ್ಷದ ಅನುಭವವನ್ನು ಹೊಂದಿರುವವರು ಉದ್ಯೋಗವನ್ನು ಪಡೆದರೆ ಪ್ರತಿ ಮಾಹೆ ಸುಮಾರು ರೂ. 7,500/- ಗಳಿಂದ ರೂ. 30,000/- ಗಳವರೆಗೆ ವೇತನವನ್ನು ಪಡೆಯಬಹುದು (ಇದು ಅವರ ಕೌಶಲ್ಯ ಮತ್ತು ಅನುಭವದ ಮೇಲೆ ಅವಲಂಬಿಸಿದೆ)

**7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?**

ಸಂಸ್ಥೆಯು ಪ್ರತ್ಯೇಕವಾದ ಉದ್ಯೋಗ ಮತ್ತು ಮಾಹಿತಿ ತರಬೇತಿ ಕೇಂದ್ರವನ್ನು ಹೊಂದಿದ್ದು ಅಂತಿಮ ವರ್ಷದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷವು ಪ್ರಸಿದ್ಧ ವಾಸ್ತು ಶಿಲ್ಪ ಸಂಸ್ಥೆಗಳು ಮತ್ತು ಸೇವಾ ಸಂಸ್ಥೆಗಳ ಮೂಲಕ ಅವರ ಅವಶ್ಯಕತೆಗನುಗುಣವಾಗಿ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಅಲ್ಲದೇ, ಇತರೆ ಸಂಸ್ಥೆಗಳ ಮೂಲಕವು ಸಹಾ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸಲಾಗುತ್ತದೆ.

**8. ಯಾವ ಯಾವ ಸಂಸ್ಥೆಗಳು ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗವಕಾಶ ಕಲ್ಪಿಸಿವೆ?**

ಐಕ್ಯಾಡ್ ಇಂಜಿನಿಯರಿಂಗ್ ಪ್ರೈ. ಲಿ. ಮೈಸೂರು, ಟೆಸ್ಕೋ ಹಿಂದೂಸ್ಥಾನ್ ಸರ್ವಿಸ್ ಸೆಂಟರ್ ಪ್ರೈ. ಲಿ., ಬೆಂಗಳೂರು, ಲ್ಯಾನ್‌ಸ್ಕೈಟ್ ಲಾಜಿಸ್ಟಿಕ್ ಲಿ., ಬೆಂಗಳೂರು. ಅನು & ತಾರಾ ಅಸೋಸಿಯೇಟ್ಸ್, ಮೈಸೂರು, ಮುಂತಾದವುಗಳು.

**9. ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?**

ಈ ಕೋರ್ಸ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ರಾಷ್ಟ್ರಮಟ್ಟದಲ್ಲಿ ನಡೆಯುವ ಪ್ರವೇಶ ಪರೀಕ್ಷೆಯಲ್ಲಿ (NATA)ಅತಿ ಹೆಚ್ಚು ಅಂಕಗಳನ್ನು ಪಡೆದು ಬಿ.ಆರ್ಕ್ (5 ವರ್ಷಗಳ ವಾಸ್ತು ಶಿಲ್ಪ ಪದವಿ) ಪದವಿ ಶಿಕ್ಷಣ ಪಡೆಯಬಹುದು. ಅಥವಾ ಇದಕ್ಕೆ ಪರ್ಯಾಯವಾಗಿ IIA (Indian Institute of Architects) ರವರಿಂದ ಬಿ.ಆರ್ಕ್ ಗೆ ಸಮನಾದ 3 ವರ್ಷಗಳ ಕೋರ್ಸ್ ಅನ್ನು ಮಾಡಬಹುದು.

## II. ಡಿಪ್ಲೋಮ ಇನ್ ಕಮರ್ಷಿಯಲ್ ಪ್ರಾಕ್ಟೀಸ್

**1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?**

ಈ ಕೋರ್ಸ್ ವಾಣಿಜ್ಯ ವ್ಯವಹಾರ ವಿಷಯಕ್ಕೆ ಸಂಬಂಧಿಸಿದೆ. ಇಲ್ಲಿ ವಿದ್ಯಾರ್ಥಿಗಳು ಲೆಕ್ಕಶಾಸ್ತ್ರ, ಅರ್ಥಶಾಸ್ತ್ರ, ವ್ಯವಹಾರ ಮತ್ತು ಮಾರುಕಟ್ಟೆ ನಿರ್ವಹಣೆ, ವ್ಯವಹಾರಿಕ ಕಾನೂನು, ತೆರಿಗೆ, ವ್ಯವಹಾರಿಕ ಅಂಕಗಣಿತ, ಅಂಕಿಅಂಶಗಳು, ಶೀಘ್ರಲಿಪಿ ಮತ್ತು ಕಂಪ್ಯೂಟರ್ ಅಪ್ಲಿಕೇಷನ್ಸ್ ಕೌಶಲ್ಯಗಳಾದ ಟ್ಯಾಲಿ, ಎಂಎಸ್ ಆಫೀಸ್, ನೆಟ್‌ವರ್ಕಿಂಗ್, ಮುಂತಾದವುಗಳನ್ನು ಅಧ್ಯಯನ ಮಾಡುತ್ತಾರೆ.

**2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?**

ಈ ವಿಭಾಗದಲ್ಲಿ ಒಳ್ಳೆಯ ಶೈಕ್ಷಣಿಕ ಅರ್ಹತೆ ಹಾಗೂ ಅನುಭವವುಳ್ಳ ಮತ್ತು ವಿಶೇಷ ಕೌಶಲ್ಯವನ್ನು ಹೊಂದಿರುವ ಸಿಬ್ಬಂದಿವರ್ಗವಿದೆ. ವಿಭಾಗವು ಕಂಪ್ಯೂಟರ್ ಪ್ರಯೋಗಾಲಯ ಮತ್ತಿತರ ಶೈಕ್ಷಣಿಕ ಚಟುವಟಿಕೆಗಳಿಗನುಗುಣವಾದ ಪಾಠೋಪಕರಣಗಳಿದ್ದು, ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಉತ್ತಮ ಪಡಿಸಿಕೊಳ್ಳಲು ಅವಕಾಶವಿದೆ.

**3. ಕೋರ್ಸ್ ಪೂರ್ಣಗೊಳಿಸಿದ ನಂತರ ಮುಂದೇನು ಮಾಡಬಹುದು?**

ಈ ಕೋರ್ಸ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ವಿವಿಧೆಡೆ ಉದ್ಯೋಗವಕಾಶಗಳನ್ನು ಪಡೆಯಬಹುದು. ಹಾಗು ವಾಣಿಜ್ಯ ವ್ಯವಹಾರ ನಿರ್ವಹಣೆ ಸಂಬಂಧಿಸಿದ ಕೋರ್ಸ್‌ಗಳಲ್ಲಿ ಉನ್ನತ ವ್ಯಾಸಂಗಗಳನ್ನು ಮಾಡಬಹುದು.

**4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?**

ಇಲ್ಲಿ ಡಿಪ್ಲೋಮ ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಬ್ಯಾಂಕ್, ವಿಶ್ವವಿದ್ಯಾನಿಲಯ, ಸರ್ಕಾರಿ ಮತ್ತು ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗವಕಾಶಗಳನ್ನು ಪಡೆಯಬಹುದು.

1. ಸಫಿಯ ಕೆ ಎ, ಕಾರ್ಯನಿರ್ವಾಹಕ ಕಾರ್ಯದರ್ಶಿಗಳು, ಎಕ್ಸೆಲ್‌ಸಾಫ್ಟ್ ಟೆಕ್ನಾಲೋಜಿಸ್ ಪ್ರೈ. ಲಿ. ಮೈಸೂರು
2. ಚಂದ್ರನ್ ವಿ ವಿ, ಸೂಪ್ರವೈಸರ್ / ಪಿಎ, ಕ್ಯಾಲಿಕಟ್ ಇಂಟರ್‌ನ್ಯಾಷನಲ್ ಏರ್‌ಪೋರ್ಟ್, ಎಎಐ, ಕ್ಯಾಲಿಕಟ್
3. ನಾಗೇಂದ್ರ ಎಚ್ ಕೆ, ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಆಫೀಸರ್, ಇನ್‌ಫೋಸಿಸ್ ಟೆಕ್ನಾಲಜೀಸ್ ಲಿ, ಬೆಂಗಳೂರು.
4. ಸತೀಶ್ ಜಿ ಪಿ, ಅಸಿಸ್ಟೆಂಟ್ ಪ್ರೊಫೆಸರ್, ವಿಟಿಯು, ಬೆಳಗಾಂ.
5. ಪುಷ್ಪಲತಾ ಬಿ ಎನ್, ಬಿಎಂಟಿಸಿ, ಶಾಂತಿನಗರ, ಬೆಂಗಳೂರು.
6. ಶ್ರುತಿ ನಿರ್ಮಲ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಮಾಗಡಿ ರೋಡ್, ಬೆಂಳೂರು.
7. ಮಹದೇವಮ್ಮ ಬಿ ಎಂ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ರಾಮಕೃಷ್ಣ ಬ್ರ್ಯಾಂಚ್, ಮೈಸೂರು.
8. ರಾಘವೇಂದ್ರ ಎಸ್ ಕೆ, ಎಸ್‌ಜೆಸಿಇ-ಸ್ಟೆಪ್, ಮೈಸೂರು.

9. ಶಿವರುದ್ರಪ್ಪ, ಕಛೇರಿ ಕಾರ್ಯನಿರ್ವಾಹಕ, ಹೋಟೆಲ್ ದಿ ಪ್ರಿನ್ಸ್, ಹುಣಸೂರು ರೋಡ್, ಮೈಸೂರು.

10. ನವೀನ್ ಕುಮಾರ್ ಹೆಚ್ ವಿ, ಕಛೇರಿ ಸಿಬ್ಬಂದಿ, ಎಸ್‌ಜೆಸಿಇ, ಮೈಸೂರು

11. ಸುನೀತ ಪಿ, ಕಛೇರಿ ಸಿಬ್ಬಂದಿ, ಜೆಎಸ್‌ಎಸ್ ಇನ್ಸ್ಟಿಟ್ಯೂಟ್ ಆಫ್ ಸ್ಪೀಚ್ & ಹಿಯರಿಂಗ್, ಮೈಸೂರು.

12. ಶಂಕರ್ ಎಸ್, ಲ್ಯಾಬ್ ಇನ್‌ಸ್ಟ್ರಕ್ಟರ್, ಜೆಎಸ್‌ಎಸ್ ವಿಶೇಷಚೇತನರ ಪಾಲಿಟೆಕ್ನಿಕ್, ಮೈಸೂರು.

13. ಪ್ರಕಾಶ್ ಎಂ ಎಸ್, ಬಿಬಿಎಂಪಿ, ಬೆಂಗಳೂರು.

14. ಭೋಗೇಶ್ ಎಸ್, ಬಿಬಿಎಂಪಿ, ಬೆಂಗಳೂರು.

15. ಜ್ಯೋತಿ ರಾಜು ಎಂ, ಕಛೇರಿ ಸಿಬ್ಬಂದಿ, ಮಿನರಲ್ ಇಂಜಿನಿಯರಿಂಗ್ ಸರ್ವಿಸಸ್, ಬಳ್ಳಾರಿ.

16. ಅರ್ಚನಮೂರ್ತಿ ಎಂ, ಕಸ್ಟಮರ್ ಸಪೋರ್ಟ್ ಆಫಿಸರ್, ಆಲಿಕ್ ಟೆಕ್ನಾಲಜಿ ಲಿ, ಬೆಂಗಳೂರು

17. ಮಹೇಶ್ ಹೆಚ್ ಎಂ, ಅಸಿಸ್ಟೆಂಟ್ ಮ್ಯಾನೇಜರ್, ಗಾಹತಿ, ಅಸ್ಸಾಮ್

18. ರೇಣುಕ ಎಂ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಬೆಂಗಳೂರು

19. ರೂಪ ಕೆ ಎಲ್, ಕೆನರಾ ಬ್ಯಾಂಕ್, ಸರ್ಕಲ್ ಆಫಿಸ್, ಮೈಸೂರು

20. ಸಂತೋಷ್ ಸಿ ಆರ್, ಟೆಕ್ನಿಕಲ್ ಅಸಿಸ್ಟೆಂಟ್, ಮೈಸೂರು ಯೂನಿವರ್ಸಿಟಿ ಲೈಬ್ರರಿ, ಮೈಸೂರು

## 5. ಡಿಪ್ಲೋಮ ಪೂರ್ಣಗೊಳಿಸಿದ ನಂತರ ದೊರೆಯಬಹುದಾದ ಉದ್ಯೋಗವಕಾಶಗಳು?

ಈ ಕೋರ್ಸ್ ಉತ್ತೀರ್ಣರಾದ ವಿದ್ಯಾರ್ಥಿಗಳು ಸರ್ಕಾರಿ ಸಂಸ್ಥೆಗಳು / ಖಾಸಗಿ ಸಂಸ್ಥೆಗಳು, ಬ್ಯಾಂಕ್‌ಗಳು, ಶೈಕ್ಷಣಿಕ ಸಂಸ್ಥೆಗಳು, ವಾಣಿಜ್ಯ ಮತ್ತು ಉದ್ದಿಮೆಗಳಲ್ಲಿ ಶೀಘ್ರಲಿಪಿಗಾರರಾಗಿ ಸೇವೆ, ಖಾಸಗಿ / ಆಪ್ತ ಕಾರ್ಯದರ್ಶಿಗಳು, ಆಪ್ತ ಸಹಾಯಕರು, ಕಛೇರಿ ಸಹಾಯಕರು, ಕಂಪ್ಯೂಟರ್ ಆಪರೇಟರ್‌ಗಳು, ಲ್ಯಾಬ್ ಇನ್‌ಸ್ಟ್ರಕ್ಟರ್‌ಗಳು, ಸ್ವಾಗತಕಾರರುಗಳಾಗಿ ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಪಡೆಯಬಹುದು.

## 6. ಉದ್ಯೋಗದ ನಂತರ ಪಡೆಯಬಹುದಾದ ವೇತನ?

ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿ ಒಂದು ವರ್ಷದ ಅನುಭವವನ್ನು ಹೊಂದಿರುವವರು ಉದ್ಯೋಗವನ್ನು ಪಡೆದರೆ ಪ್ರತಿ ಮಾಹೆ ಸುಮಾರು ರೂ. 4,000/- ಗಳಿಂದ ರೂ. 10,000/- ಗಳವರೆಗೆ ವೇತನವನ್ನು ಪಡೆಯಬಹುದು (ಇದು ಅವರ ಕೌಶಲ್ಯ ಮತ್ತು ಅನುಭವದ ಮೇಲೆ ಅವಲಂಭಿಸಿದೆ)

## 7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?

ಹೌದು. ಸಂಸ್ಥೆಯು ಪ್ರತ್ಯೇಕವಾದ ಉದ್ಯೋಗ ಮತ್ತು ಮಾಹಿತಿ ತರಬೇತಿ ಕೇಂದ್ರವನ್ನು ಹೊಂದಿದ್ದು ಇದಕ್ಕೆ Placement Officer ಹಾಗು ವಿಭಾಗವಾರು ಸಂಯೋಜಕರುಗಳು ಇರುತ್ತಾರೆ. ಈ ಘಟಕವು ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಸಂದರ್ಶನ, ಕಾರ್ಯಕ್ರಮವನ್ನು ಏರ್ಪಡಿಸಿ ವಿವಿಧ ಸಂಸ್ಥೆಗಳಲ್ಲಿ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸಲಾಗುತ್ತದೆ.

## 8. ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?

ಡಿಪ್ಲೋಮ ಉತ್ತೀರ್ಣರಾದ ವಿದ್ಯಾರ್ಥಿಗಳು ಅಂಗೀಕೃತ ವಿಶ್ವವಿದ್ಯಾನಿಲಯದ ಮೂಲಕ ನೇರವಾಗಿ ದ್ವಿತೀಯ ವರ್ಷದ ಬಿ.ಕಾಂ / ಬಿಬಿಎಂ ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆಯಬಹುದು.

## III. ಡಿಪ್ಲೋಮ ಇನ್ ಕಂಪ್ಯೂಟರ್ ಸೈನ್ಸ್ & ಇಂಜಿನಿಯರಿಂಗ್

### 1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?

ಈ ಕೋರ್ಸ್‌ನಲ್ಲಿ ವಿದ್ಯಾರ್ಥಿಗಳು ಇಂಗ್ಲಿಷ್ ಕಮ್ಯೂನಿಕೇಷನ್, ಇಂಜಿನಿಯರಿಂಗ್ ಗಣಿತ, ಇಂಜಿನಿಯರಿಂಗ್ ಭೌತಶಾಸ್ತ್ರ, ಬೇಸಿಕ್ ಎಲೆಕ್ಟ್ರಾನಿಕ್ಸ್, ಮುಂತಾದವುಗಳಲ್ಲದೇ C, C++, Java, VB, Oracle, Hardware & Networking, Operating System concepts, ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತದೆ.

### 2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?

ವಿಭಾಗವು ವಿಶೇಷ ತಾಂತ್ರಿಕತೆಯ ಕೊಠಡಿಗಳ ಜೊತೆಗೆ ಮಲ್ಟಿಮೀಡಿಯ ಪ್ರೊಜೆಕ್ಟರ್, ಸುಸಜ್ಜಿತವಾದ ಆಧುನಿಕ ತಾಂತ್ರಿಕತೆಯನ್ನುಳ್ಳ ಅತ್ಯಾಧುನಿಕ ಎಲೆಕ್ಟ್ರಾನಿಕ್ ಉಪಕರಣಗಳನ್ನು ಹೊಂದಿದೆ. ಹಾಗೂ ಹೊಸ ತಂತ್ರಜ್ಞಾನದ ಮೂಲಕ ಶೈಕ್ಷಣಿಕವಾಗಿ ವಿದ್ಯಾರ್ಥಿಗಳಿಗೆ ಬೋಧನೆ ಮಾಡುವ ಒಳ್ಳೆಯ ಶೈಕ್ಷಣಿಕ ಹೊಂದಿರುವ ಸಿಬ್ಬಂದಿವರ್ಗದವರನ್ನು ವಿಭಾಗವು ಹೊಂದಿದೆ.

### 3. ಕೋರ್ಸ್ ಪೂರ್ಣಗೊಳಸಿದ ನಂತರ ಮುಂದೇನು ಮಾಡಬಹುದು?

ಕೋರ್ಸ್ ಪೂರ್ಣಗೊಳಸಿದ ವಿದ್ಯಾರ್ಥಿಗಳು ಕಂಪ್ಯೂಟರ್‌ಗೆ ಸಂಬಂಧಿಸಿದ ಕ್ಷೇತ್ರಗಳಲ್ಲಿ ಉದ್ಯೋಗವಕಾಶವನ್ನು ಪಡೆಯಬಹುದು ಅಥವಾ ತಮ್ಮ ವ್ಯಾಸಂಗವನ್ನು ಮುಂದುವರಿಸಬಹುದು

### 4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?

ಕೋರ್ಸ್ ಪೂರ್ಣಗೊಳಸಿದ ಹಿರಿಯ ವಿದ್ಯಾರ್ಥಿಗಳು ಈ ಕೆಳಕಂಡ ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳಲ್ಲಿ ಉದ್ಯೋಗಾವಕಾಶ ಪಡೆದಿದ್ದಾರೆ.

1. ಅನಿಲ್ ಕುಮಾರ್, ಸೈಂಟೀಸ್ಟ್, ಸಿಎಫ್‌ಟಿಆರ್‌ಐ, ಮೈಸೂರು
2. ಕೃಷ್ಣ ಪ್ರಕಾಶ್, ಟೆಕ್ನಾಲಜಿ ಮ್ಯಾನೇಜರ್, ಎಕ್ಸೆಲ್ ಸಾಫ್ಟ್, ಮೈಸೂರು
3. ಶಿವಶಂಕರ್, ಆಸಿಸ್ಟೆಂಟ್ಸ್ ಪ್ರೊಫೆಸರ್, ಸರ್ಕಾರಿ ಇಂಜಿನಿಯರ್ ಕಾಲೇಜ್, ಹೂವಿನ ಹಡಗಲಿ, ಬಳ್ಳಾರಿ ಜಿಲ್ಲೆ.
4. ಬಾನುಮತಿ ಡಿ, ಉಪನ್ಯಾಸಕರು, ಜೆಎಸ್‌ಎಸ್ ಪಾಲಿಟೆಕ್ನಿಕ್, ಮೈಸೂರು
5. ಪದ್ಮಿನಿ ವೈ, ಸಾಫ್ಟ್‌ವೇರ್ ಇಂಜಿನಿಯರ್, ಎಲ್&ಟಿ, ಮೈಸೂರು.
6. ರವಿಕುಮಾರ್ ನಾಯಕ್ ಜಿ, ಸಾಫ್ಟ್‌ವೇರ್ ಇಂಜಿನಿಯರ್, ವಿನ್ಡೆಂಟ್ ಸಾಫ್ಟ್, ಬೆಂಗಳೂರು.
7. ಸೂರ್ಯಕಾಂತ್, ಟೆಕ್ನಿಕಲ್ ಆಫಿಸರ್, ಎಸ್‌ಟಿಪಿಐ, ಮೈಸೂರು.
8. ಸತೀಶ್ ಬಾಬು ಎ, ಸೀನಿಯರ್ ಇಂಜಿನಿಯರ್, ಸಿಂಫೊನಿ ಟೆಕ್, ಬೆಂಗಳೂರು
9. ಶ್ವೇತ ವಾಲಿಶೆಟ್ಟರ್, ಕಂಪ್ಯೂಟರ್ ಶಿಕ್ಷಕರು, ಗದಗ

### 5. ಡಿಪ್ಲೋಮ ಪೂರ್ಣಗೊಳಸಿದ ನಂತರ ದೊರೆಯಬಹುದಾದ ಉದ್ಯೋಗಾವಕಾಶಗಳು?

ಈ ಕೋರ್ಸನ್ನು ಪೂರ್ಣಗೊಳಸಿದ ವಿದ್ಯಾರ್ಥಿಗಳು ಖಾಸಗಿ / ಸರ್ಕಾರಿ ಸಂಸ್ಥೆಗಳಲ್ಲದೇ, ಸಂಘ ಸಂಸ್ಥೆಗಳು, ಕೈಗಾರಿಕಾ ಸಂಸ್ಥೆಗಳು, ಶಿಕ್ಷಣ ಸಂಸ್ಥೆಗಳಲ್ಲಿ ಪ್ರೋಗ್ರಾಮರ್‌ಗಳಾಗಿ, ಕಂಪ್ಯೂಟರ್ ಆಪರೇಟರ್‌ಗಳಾಗಿ, ಶಿಕ್ಷಕರಾಗಿ (ಇನ್ಸ್‌ಟ್ರಕ್ಟರ್ಸ್‌ಗಳಾಗಿ), ಪ್ರಯೋಗಾಲಯ ಸಹಾಯಕರು, ಮುಂತಾದ ಹುದ್ದೆಗಳಲ್ಲಿ ಸೇವೆ ಸಲ್ಲಿಸಬಹುದಾಗಿದೆ.

### 6. ಉದ್ಯೋಗದ ನಂತರ ಪಡೆಯಬಹುದಾದ ವೇತನ?

ಪ್ರಾರಂಭದಲ್ಲಿ ಸುಮಾರು ರೂ. 5,000 – 15,000/– ಗಳು ಹಾಗೂ ಇತರೆ ಭತ್ಯೆಗಳನ್ನು ಪಡೆಯಬಹುದಾಗಿರುತ್ತದೆ. ಇವರ ವೇತನವು ಅವರ ಅನುಭವ, ನೈಪುಣ್ಯತೆ, ಕೆಲಸವಿರುವ ಸ್ಥಳ ಸಂಸ್ಥೆಯ ಮೇಲೆ ಅವಲಂಬಿತವಾಗಿರುತ್ತದೆ. ಕೆಲವೊಮ್ಮೆ ವೇತನವು ಪ್ಯಾಕೇಜ್‌ಗಳ ರೂಪದಲ್ಲಿರುತ್ತದೆ.

**7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?**

ಹೌದು, ಸಂಸ್ಥೆಯು ಪ್ರತ್ಯೇಕವಾದ ಉದ್ಯೋಗ ಮತ್ತು ಮಾಹಿತಿ ತರಬೇತಿ ಕೇಂದ್ರವನ್ನು ಹೊಂದಿದ್ದು ಅಂತಿಮ ವರ್ಷದ ವ್ಯಾಸಂಗ ಮಾಡುವ ವಿದ್ಯಾರ್ಥಿಗಳಿಗಾಗಿ ಪ್ರಸಿದ್ಧ ಸಂಸ್ಥೆಗಳು ಮತ್ತು ಸೇವಾ ಸಂಸ್ಥೆಗಳ ಮೂಲಕ ಅವರ ಅವಶ್ಯಕತೆಗನುಗುಣವಾಗಿ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲಾಗುತ್ತಿದೆ. ಅಲ್ಲದೇ, ಇತರೆ ಸಂಸ್ಥೆಗಳ ಮೂಲಕವು ಸಹಾ ಉದ್ಯೋಗವಕಾಶಗಳನ್ನು ಕಲ್ಪಿಸಿಕೊಡಲು ಪ್ರಯತ್ನಿಸಲಾಗುತ್ತದೆ.

**8. ಯಾವ ಯಾವ ಸಂಸ್ಥೆಗಳು ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗವಕಾಶ ಕಲ್ಪಿಸಿವೆ?**

ವಿಪ್ರೊ, ಇನ್‌ಫೋಟೆಕ್, ಮೈಸೂರು, ಐಬಿಎಂ ಬೆಂಗಳೂರು, ವಿಂದ್ಯಾ ಇನ್‌ಫೋಟೆಕ್, ಬೆಂಗಳೂರು, ಮುಂತಾದ ಕಂಪನಿಗಳು ಸಂಸ್ಥೆಯಲ್ಲಿ ಕ್ಯಾಂಪಸ್ ಸಂದರ್ಶನ ಏರ್ಪಡಿಸಿ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟಿವೆ.

**9. ಡಿಪ್ಲೋಮ ಕೋರ್ಸನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?**

3 ವರ್ಷಗಳ ಡಿಪ್ಲೋಮ ಪೂರ್ಣಗೊಳಿಸಿದ ವಿದ್ಯಾರ್ಥಿಗಳು 2ನೇ ವರ್ಷದ ಕಂಪ್ಯೂಟರ್ ಸೈನ್ಸ್, ಬಿಸಿಎ, ಬಿ.ಎಸ್ಸಿ(ಐಟಿ) ಪದವಿ ತರಗತಿಗೆ ನೇರವಾಗಿ ಪ್ರವೇಶಾತಿ ಪಡೆಯಬಹುದು. ಜೊತೆಗೆ ಹಲವು ಅಲ್ಪಾವಧಿ ತರಬೇತಿಗಳನ್ನು ಪಡೆಯಬಹುದು.

## IV. ಡಿಪ್ಲೋಮ ಇನ್ ಜ್ಯೂಯಲರಿ ಡಿಸೈನ್ & ಟೆಕ್ನಾಲಜಿ

**1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?**

ಈ ಕೋರ್ಸ್‌ನಲ್ಲಿ ಚಿನ್ನಾಭರಣಗಳ ತಯಾರಿಕೆಗೆ ಸಂಬಂಧಿಸಿದ ಕೌಶಲ್ಯಗಳನ್ನು ಕೆಳಕಂಡ ವಿಷಯಗಳಲ್ಲಿ ತಿಳಿಸಿಕೊಡಲಾಗುತ್ತದೆ:

ಮೆಟಲಾರ್ಜಿ, ಚಿನ್ನಾಭರಣಗಳ ಡಿಸೈನಿಂಗ್ ಮತ್ತು ತಯಾರಿಕೆ, ರಿಫೈನಿಂಗ್ & ಅಸ್ಸೈನಿಂಗ್, ಹರಳು & ಕಲ್ಲುಗಳ ಜೋಡಣೆ, ಜ್ಯೂಯಲರಿ ಕಾಸ್ಟಿಂಗ್, ಕ್ಯಾಡ್ ಬಳಕೆಯ ಮೂಲಕ ಡಿಸೈನ್ ಮಾಡುವುದು ಮತ್ತು ಚಿನ್ನಾಭರಣ ತಯಾರಿಕಾ ಉದ್ದಿಮೆಗಳಲ್ಲಿ ಆಡಳಿತ ನಿರ್ವಹಣೆ ಬಗ್ಗೆ ಕಲಿಸಿಕೊಡಲಾಗುತ್ತದೆ.

**2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?**

ಈ ವಿಭಾಗವು ಶೈಕ್ಷಣಿಕ ಅವಶ್ಯಕತೆಗಣುಗುಣವಾಗಿ ಪ್ರತ್ಯೇಕವಾದ ವರ್ಕ್ ಬೆಂಚ್‌ಗಳು, ಟೂಲ್‌ಕಿಟ್‌ಗಳು, ಆಧುನಿಕ ಯಂತ್ರೋಪಕರಣಗಳು, ಪ್ರಯೋಗಾಲಯಗಳು ಹಾಗು ಸಂಪೂರ್ಣ ಗಣಕೀಕರಣಗೊಂಡ ಚಿನ್ನಾಭರಣಗಳ ಡಿಸೈನಿಂಗ್ ಸಾಫ್ಟ್‌ವೇರ್‌ಗಳನ್ನು ಹೊಂದಿದೆ.

**3. ಕೋರ್ಸ್ ಪೂರ್ಣಗೊಳಿಸಿದ ನಂತರ ಮುಂದೇನು ಮಾಡಬಹುದು?**

ಕೋರ್ಸ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಬಹುದೊಡ್ಡ ಚಿನ್ನಾಭರಣ ತಯಾರಿಕ ಉದ್ದಿಮೆಗಳಲ್ಲಿ ಉದ್ಯೋಗವಕಾಶವನ್ನು ಪಡೆಯಬಹುದು.

**4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?**

ಇಲ್ಲ ಕೋರ್ಸ್ ಅನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ರಾಷ್ಟ್ರ ಮತ್ತು ಕೆಲವು ವಿದ್ಯಾರ್ಥಿಗಳು ಅಂತರರಾಷ್ಟ್ರ ಮಟ್ಟದಲ್ಲಿಯೂ ಈ ಕ್ಷೇತ್ರದಲ್ಲಿ ಉದ್ಯೋಗವಕಾಶ ಪಡೆದಿದ್ದಾರೆ.

1. ಯುವರಾಜ್ ಕೆ ಆರ್, ಜ್ಯೂಯಲರಿ ಡಿಸೈನರ್, ದುಬೈ
2. ದಿವ್ಯಶ್ರೀ ಶಾಸ್ತ್ರಿ, ಧಾಮಿನಿ ಜ್ಯೂಯಲ್ಸ್ ಎಲ್‌ಎಸ್‌ಸಿ, ಡಿಸೈನರ್, ದುಬೈ (ಯುಎಇ)
3. ದರ್ಶನ್ ಗೌಡ, ಧಾಮಿನಿ ಜ್ಯೂಯಲ್ಸ್ ಎಲ್‌ಎಸ್‌ಸಿ, ಡಿಸೈನರ್, ದುಬೈ (ಯುಎಇ)
4. ಭರತ್ ಸಂಜಿ, ರೋಜ್ಜ್ ಬ್ಲೂ, ಸೇಲ್ಸ್ ಕೋ-ಆರ್ಡಿನೇಟರ್, ದುಬೈ (ಯುಎಇ)

ಈ ಕೆಳಕಂಡ ಕೆಲವು ವಿದ್ಯಾರ್ಥಿಗಳು ಭಾರತದ ವಿವಿಧೆಡೆ ಉದ್ಯೋಗ ಪಡೆದಿದ್ದಾರೆ.

1. ಅರುಣ್ ಕುಮಾರ್, ಗಂಜಮ್ ಜ್ಯೂಯಲರಿ, ಬೆಂಗಳೂರು.
2. ಪ್ರಮೋದ್, ಗಂಜಾಮ್ ಜ್ಯೂಯಲರಿ, ಬೆಂಗಳೂರು.
3. ಉಷರಾಣಿ, ಗಂಜಾಮ್ ಜ್ಯೂಯಲರಿ, ಬೆಂಗಳೂರು.
4. ಹಿಮ ಕಲ್ಯಾಣಿ, ಗಂಜಾಮ್ ಜ್ಯೂಯಲರಿ, ಬೆಂಗಳೂರು.
5. ಗಿರಿಯಪ್ಪ, ಸೂರಜ್ ಡೈಮಂಡ್, ಬೆಂಗಳೂರು.

6. ಚೆನ್ನಬಸವರಾಜು, ಸೂರಜ್ ಡೈಮಂಡ್, ಬೆಂಗಳೂರು.
7. ನವೀನ್ ಕುಮಾರ್, ಸೂರಜ್ ಡೈಮಂಡ್, ಬೆಂಗಳೂರು.
8. ಕಾರ್ತಿಕ್ ಎಂ, ಸೂರಜ್ ಡೈಮಂಡ್, ಬೆಂಗಳೂರು.
9. ಕಾರ್ತಿಕ್ ರೆಡ್ಡಿ, ಸೂರಜ್ ಡೈಮಂಡ್, ಬೆಂಗಳೂರು.
10. ಮಮತ, ಸೂರಜ್ ಡೈಮಂಡ್, ಬೆಂಗಳೂರು.
11. ಶಾಲಿನಿ, ಸೂರಜ್ ಡೈಮಂಡ್, ಬೆಂಗಳೂರು.
12. ಅನಂತ್ ನಾರಾಯಣ್, ಸಿಕೆಸಿ ಜ್ಯೂಯಲರಿ, ಬೆಂಗಳೂರು.
13. ಬಾಲಕೃಷ್ಣ, ರಿಲಯನ್ಸ್ ಜ್ಯೂಯಲರಿ, ಬೆಂಗಳೂರು.
14. ರಾಜೇಶ್ ಕುಮಾರ್ ಜಿನ್ನಾಲ, ಕೀರ್ತಿಲಾಲ್ ಕಾಳದಾಸ ಜ್ಯೂಯಲರ್ಸ್, ಹೈದರಾಬಾದ್
15. ಮಹೇಶ್, ಗೀತಾಂಜಲಿ ಜ್ಯೂಯಲರ್ಸ್, ಮೈಸೂರು
16. ಸುರಕ್ಷಿತ್, ಭೀಮ & ಬ್ರದರ್ಸ್, ಮೈಸೂರು
17. ನಂದೀಶ್, ತನಿಷ್ಕ್ ಜ್ಯೂಯಲರ್ಸ್, ಮೈಸೂರು

**5. ಡಿಪ್ಲೋಮ ಪೂರ್ಣಗೊಳಿಸಿದ ನಂತರ ದೊರೆಯಬಹುದಾದ ಉದ್ಯೋಗಾವಕಾಶಗಳು?**

ಕೋರ್ಸನ್ನು ಪೂರ್ಣಗೊಳಿಸಿದ ವಿದ್ಯರ್ಥಿಗಳು ಪ್ರತಿಷ್ಠಿತ ಚಿನ್ನಾಭರಣ ತಯಾರಿಕೆ ಉದ್ದಿಮೆಗಳಲ್ಲಿ ಮೇಲ್ವಿಚಾರಕರು, ಡಿಸೈನರ್‌ಗಳು, ಗುಣಮಟ್ಟ ನಿಯಂತ್ರಕರು, ಸಮೂಹ (ತಂಡದ) ವ್ಯವಸ್ಥಾಪಕರು, ಮಾಡಲ್‌ಮೇಕರ್, ಮುಂತಾದ ಉದ್ಯೋಗವಕಾಶಗಳನ್ನು ರಾಷ್ಟ್ರ ಮತ್ತು ಅಂತರರಾಷ್ಟ್ರ ಮಟ್ಟದಲ್ಲಿ ಪಡೆಯಬಹುದಾಗಿದೆ.

**6. ಉದ್ಯೋಗದ ನಂತರ ಪಡೆಯಬಹುದಾದ ವೇತನ?**

ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದವರು ಪ್ರತಿ ಮಾಹೆ ಸುಮಾರು ರೂ. 8,000/- ಗಳಿಂದ ರೂ. 70,000/- ಗಳವರೆಗೆ ವೇತನವನ್ನು ಪಡೆಯಬಹುದು (ಇದು ಅವರ ಕೌಶಲ್ಯ ಮತ್ತು ಅನುಭವದ ಮೇಲೆ ಅವಲಂಬಿಸಿದೆ)

**7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?**

ಹೌದು. ಕೋರ್ಸನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳಗಾಗಿ ಪಾಲಿಟೆಕ್ನಿಕ್‌ನಲ್ಲಿ ಪ್ರತಿಷ್ಠಿತ ಚಿನ್ನಾಭರಣ ತಯಾರಿಕ ಉದ್ದಿಮೆದಾರರನ್ನು ಆಹ್ವಾನಿಸಿ ಉದ್ಯೋಗ ಮೇಳ ಏರ್ಪಡಿಸಿ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಡಲಾಗುವುದು.

**8. ಯಾವ ಯಾವ ಸಂಸ್ಥೆಗಳು ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗವಕಾಶ ಕಲ್ಪಿಸಿವೆ?**

ಸಂಸ್ಥೆಗೆ ನಿರಂತರವಾಗಿ ಸೂರಜ್ ಡೈಮಂಡ್, ಬೆಂಗಳೂರು, ತನಿಷ್ಕ್, ಬೆಂಗಳೂರು, ಆರ್‌ಕೆಆರ್ ಜ್ಯೂಯಲರ್ಸ್, ಕೊಯಂಬತ್ತೂರ್, ಗಂಜಾಮ್ ಜ್ಯೂಯಲರ್ಸ್, ಬೆಂಗಳೂರು, ಮುಂತಾದವುಗಳು ಮತ್ತು ಸ್ಥಳೀಯ ಚಿನ್ನಾಭರಣ ತಯಾರಿಕಾ ಸಂಸ್ಥೆಗಳವರು ಉದ್ಯೋಗಮೇಳ ನಡೆಸುತ್ತಾರೆ.

**9. ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?**

ಪ್ರಸ್ತುತ ಈ ಕೋರ್ಸ್ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳು ಮಣಿಪಾಲ್ ವಿಶ್ವವಿದ್ಯಾನಿಲಯದ (ಮಣಿಪಾಲ್) ಮೂಲಕ ಬಿ.ಬಿ.ಎ (ಚಿನ್ನಾಭರಣ) ಪದವಿಯನ್ನು ಪಡೆಯುತ್ತಿದ್ದಾರೆ.

## V. ಡಿಪ್ಲೋಮ ಇನ್ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್

**1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?**

ಈ ಕೋರ್ಸ್ ಇಂಗ್ಲಿಷ್ ಸಂವಹನ ಕೌಶಲ್ಯದೊಂದಿಗೆ ಇಂಜಿನಿಯರಿಂಗ್ ಗಣಿತ, ಬೇಸಿಕ್ ಎಲೆಕ್ಟ್ರಾನಿಕ್ಸ್, ಡಿಜಿಟಲ್ ಎಲೆಕ್ಟ್ರಾನಿಕ್ಸ್, ಅನಲಾಗ್ ಎಲೆಕ್ಟ್ರಾನಿಕ್ಸ್, ವೈದ್ಯಕೀಯ ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ಡಿವೈಸಸ್, ಸಿ ಪ್ರೋಗ್ರಾಮಿಂಗ್ ಲಾಂಗ್ವೇಜ್, ಮೈಕ್ರೊ ಪ್ರೊಸೆಸರ್ಸ್, ಮೈಕ್ರೋ ಕಂಟ್ರೋಲರ್ಸ್, ಅನಲಾಗ್, ಡಿಜಿಟಲ್ & ಅಡ್ವಾನ್ಸ್ ಕಮ್ಯೂನಿಕೇಷನ್, ಬೇಸಿಕ್ ಆಡಳಿತ ನೈಪುಣ್ಯ ಮತ್ತು ಭಾರತೀಯ ಸಂವಿಧಾನ, ಮುಂತಾದ ವಿಷಯಗಳನ್ನು ಹೊಂದಿದೆ.

**2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?**

ವಿಭಾಗವು ಉತ್ತಮ ಶೈಕ್ಷಣಿಕ ಅರ್ಹತೆಯನ್ನು ಹೊಂದಿರುವ ಸಿಬ್ಬಂದಿವರ್ಗದವರು, ಆಧುನಿಕ ಲ್ಯಾಬ್ ಮತ್ತು ತಂತ್ರಜ್ಞಾನ ಹೊಂದಿರುವ ತರಗತಿ ಕೊಠಡಿಗಳು, ವಿಶೇಷ ತಳಹದಿಯ ಮೇಲೆ ಇಂಗ್ಲಿಷ್ ಮತ್ತು ಗಣಿತ ಬೋಧನೆ ಹಾಗು ಉದ್ಯೋಗವಕಾಶ ಸೌಲಭ್ಯವನ್ನು ಹೊಂದಿದೆ.

**3. ಕೋರ್ಸ್ ಪೂರ್ಣಗೊಳಿಸಿದ ನಂತರ ಮುಂದೇನು ಮಾಡಬಹುದು?**

ಕೋರ್ಸನ್ನು ಪೂರ್ಣಗೊಳಿಸಿರುವ ವಿದ್ಯಾರ್ಥಿಗಳು ಬಹುರಾಷ್ಟ್ರೀಯ ಕಂಪನಿಗಳು, ಸರ್ಕಾರಿ ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಪಡೆಯಬಹುದು. ಉನ್ನತ ವ್ಯಾಸಂಗ ಮಾಡಬಯಸುವವರು ನೇರವಾಗಿ 2ನೇ ವರ್ಷದ ಬಿ.ಇ. (ಇಸಿ) / ಬಿ.ಎಸ್ಸಿ (ಎಲೆಕ್ಟ್ರಾನಿಕ್ಸ್) ಪದವಿಗೆ ಪ್ರವೇಶಾತಿ ಪಡೆಯಬಹುದು.

**4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?**

ಕೋರ್ಸನ್ನು ಪೂರ್ಣಗೊಳಿಸಿದ ಹಿರಿಯ ವಿದ್ಯಾರ್ಥಿಗಳು ಕೆಳಕಂಡ ಸರ್ಕಾರಿ / ಖಾಸಗಿ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಪಡೆದಿರುತ್ತಾರೆ:

1. ಹರೀಶ್ ಎಂ ಎನ್, ಜೂನಿಯರ್ ಇಂಜಿನಿಯರ್, ಕೆಪಿಟಿಸಿಎಲ್, ಕೊಳ್ಳೆಗಾಲ, ಚಾಮರಾಜನಗರ.
2. ಸಮೀರ್ ಸಾಹೆಬ್, ಟೆಕ್ನಿಕಲ್ ಸಪೋರ್ಟ್, ಐಬಿಎಂ ಇಂಡಿಯ ಪ್ರೈ. ಲಿ., ಬೆಂಗಳೂರು.
3. ಸಿಂಧು ಬಿ ಮೂರ್ತಿ, ಇಂಜಿನಿಯರ್ ಟ್ರೈನಿ, ವಿಪ್ರೊ ಇನ್‌ಫೊಟೆಕ್, ಮೈಸೂರು.
4. ವೆಂಕಟೇಶ ಎ ಕೆ, ಇಂಜಿನಿಯರ್ ಟ್ರೈನಿ, ವಿಪ್ರೊ ಇನ್‌ಫೊಟೆಕ್, ಮೈಸೂರು.
5. ವಸಂತ್ ಕುಮಾರ್, ಐ ಟಿ ಅನಾಲಿಸ್ಟ್, ಟಿಸಿಎಸ್, ಬೆಂಗಳೂರು.
6. ಆರ್ಮುಗಮ್ ಎನ್, ಸೀನಿಯರ್ ಡಾಟಾ ಅನಾಲಿಸ್ಟ್, ಸ್ಟ್ರಾಟೆಜಿಕ್ ಔಟ್‌ಸೋರ್ಸಿಂಗ್ ಸರ್ವಿಸಸ್ ಪ್ರೈ. ಲಿ., ಬೆಂಗಳೂರು
7. ಸುಬ್ರಮಣಿ ಸಿಂಗ್, ಸೀನಿಯರ್ ಇಂಜಿನಿಯರಿಂಗ್ ಅಸಿಸ್ಟೆಂಟ್ –ಬಿ, ಬಿಇಎಲ್, ಬೆಂಗಳೂರು
8. ವಿಶ್ವಾಸ್ ಹೆಚ್ ಪಿ, ಸೀನಿಯರ್ ಇಂಜಿನಿಯರಿಂಗ್ ಅಸಿಸ್ಟೆಂಟ್ –ಬಿ, ಬಿಇಎಲ್, ಬೆಂಗಳೂರು
9. ಭವ್ಯ ಎನ್, ಜೂನಿಯರ್ ಡಿಸೈನರ್, ಅದ್ವಿತ್ ಗ್ಲೋಬಲ್, ಎಸ್‌ಜೆಸಿಇ ಕ್ಯಾಂಪಸ್, ಮೈಸೂರು
10. ಕಾರ್ತಿಕ್ ರಾಜ್, ಫೈನ್ಯಾಂಷಿಯಲ್ ಅಡ್ಮಿನಿಷ್ಟೇಟರ್, ಹೆಚ್ ಪಿ, ಬೆಂಗಳೂರು
11. ಜಯನಂದ ಎಸ್ ಪಿ, ಟೆಕ್ನೀಷಿಯನ್ – ಬಿ, ಬಿಇಎಲ್, ಬೆಂಗಳೂರು
12. ಸಂದೀಪ್ ಕುಮಾರ್ ಹೆಚ್ ಆರ್, ಕ್ಲರ್ಕ್, ಕೆನರಾ ಬ್ಯಾಂಕ್, ಸರಸ್ವತಿಪುರಂ, ಮೈಸೂರು.

**5. ಡಿಪ್ಲೋಮ ಪೂರ್ಣಗೊಳಿಸಿದ ನಂತರ ದೊರೆಯಬಹುದಾದ ಉದ್ಯೋಗವಕಾಶಗಳು?**

ಕಂಪನಿಗಳಲ್ಲಿ – ಹಾರ್ಡ್‌ವೇರ್ ಮತ್ತು ಸರ್ವಿಸ್ ಇಂಜಿನಿಯರ್‌ಗಳು, ಟೆಸ್ಟಿಂಗ್ ಇಂಜಿನಿಯರ್‌ಗಳು, ತಾಂತ್ರಿಕ ಸಹಾಯಕರು, ಮುಂತಾದವು.

ಶೈಕ್ಷಣಿಕ ಸಂಸ್ಥೆಗಳಲ್ಲಿ – ಬೋಧಕರು, ಸಹಾಯಕ ಬೋಧಕರು, ಮುಂತಾದವುಗಳು

ಸರ್ಕಾರಿ ಸಂಸ್ಥೆಗಳು – ಕಿರಿಯ ಅಭಿಯಂತರರು, ತಾಂತ್ರಿಕ ಸಹಾಯಕರು, ಮುಂತಾದ ಹುದ್ದೆಗಳನ್ನು ಪಡೆಯಬಹುದಾಗಿದೆ.

**6. ಉದ್ಯೋಗದ ನಂತರ ಪಡೆಯಬಹುದಾದ ವೇತನ?**

ಕೋರ್ಸನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಪ್ರತಿ ಮಾಹೆ ಸುಮಾರು ರೂ. 10,000/- ಗಳಿಂದ ರೂ. 20,000/- ಗಳಗಿಂತ ಹೆಚ್ಚು ವೇತನವನ್ನು ಪಡೆಯಬಹುದು.

**7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?**

ಹೌದು. ಪಾಲಿಟೆಕ್ನಿಕ್ ಉದ್ಯೋಗ ಮತ್ತು ತರಬೇತಿ ಕೇಂದ್ರವನ್ನು ಹೊಂದಿದ್ದು, ಇದರ ಮೂಲಕ ಉದ್ಯೋಗವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ.

**8. ಯಾವ ಯಾವ ಸಂಸ್ಥೆಗಳು ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗವಕಾಶ ಕಲ್ಪಿಸಿವೆ?**

ಈ ಕೆಳಕಂಡ ಸಂಸ್ಥೆಗಳು ಇಲ್ಲಿಯ ವಿದ್ಯಾರ್ಥಿಗಳಿಗೆ ಉದ್ಯೋಗವಕಾಶವನ್ನು ಕಲ್ಪಿಸಿಕೊಟ್ಟಿವೆ.

1. ವಿಪ್ರೊ ಇನ್‌ಫೊಟೆಕ್, ಮೈಸೂರು.
2. ಐಬಿಎಂ ಇಂಡಿಯ ಪ್ರೈ. ಲಿ., ಬೆಂಗಳೂರು.
3. ಇನ್‌ಫೋಸಿಸ್, ಮೈಸೂರು
4. ವಿನ್ಯಾಸ್ ಟೆಕ್ನಾಲಜೀಸ್, ಮೈಸೂರು
5. ವಿಂದ್ಯಾ ಇನ್‌ಫೊಟೆಕ್, ಬೆಂಗಳೂರು.
6. ಥೊಟ್ ಫೋಕಸ್, ಬೆಂಗಳೂರು.
7. ಸನ್ ಐಟಿಇಸ್ ಕನ್ಸಲ್ಟಿಂಗ್ ಪ್ರೈ. ಲಿ., ಬೆಂಗಳೂರು
8. ಎಂಫಾಸಿಸ್, ಬೆಂಗಳೂರು
9. ಸ್ಟ್ರಾಟೆಜಿಕ್ ಔಟ್‌ಸೋರ್ಸ್ ಪ್ರೈ. ಲಿ., ಬೆಂಗಳೂರು
10. ಎಇಜಿಐಎಸ್ ಬಿಪಿಓ, ಬೆಂಗಳೂರು
11. ಆರ್‌ಇಐ ಎಲೆಕ್ಟ್ರಿಕಲ್ಸ್, ಮೈಸೂರು

**9. ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?**

3 ವರ್ಷಗಳ ಡಿಪ್ಲೋಮ ಪೂರ್ಣಗೊಳಿಸಿದ ವಿದ್ಯಾರ್ಥಿಗಳು ನೇರವಾಗಿ 2ನೇ ವರ್ಷದ ಎಲೆಕ್ಟ್ರಾನಿಕ್ಸ್ & ಕಮ್ಯೂನಿಕೇಷನ್ ಇಂಜಿನಿಯರಿಂಗ್, ಬಿ.ಎಸ್ಸಿ(ಇಸಿ) ಪದವಿ ತರಗತಿಗೆ ನೇರವಾಗಿ ಪ್ರವೇಶಾತಿ ಪಡೆಯಬಹುದು. ಜೊತೆಗೆ ಹಲವು ಅಲ್ಪಾವಧಿ ತರಬೇತಿಗಳನ್ನು ಪಡೆಯಬಹುದು.

## VI. ಡಿಪ್ಲೋಮ ಇನ್ ಕಂಪ್ಯೂಟರ್ ಅಪ್ಲಿಕೇಷನ್ಸ್ ಫಾರ್ ದಿ ವಿಷ್ಯುಯಲಿ ಇಂಪೇರ್ಡ್

**1. ಈ ಕೋರ್ಸ್‌ನಲ್ಲಿ ಏನು ಅಧ್ಯಯನ ಮಾಡಬಹುದು?**

ಈ ಕೋರ್ಸ್‌ನಲ್ಲಿ ಇಂಗ್ಲಿಷ್ ಸಂಪರ್ಕ ಕೌಶಲ್ಯದ ಜೊತೆಗೆ ಭಾರತೀಯ ಸಂವಿಧಾನ, ಸಮೂಹ ಮಾಧ್ಯಮ & ಕಾಲ್ ಸೆಂಟರ್ ತರಬೇತಿಗಳನ್ನು ನೀಡಲಾಗುತ್ತದೆ. ಅಲ್ಲದೆ, ವಾಣಿಜ್ಯ ವಿಷಯಗಳಾದ ಲೆಕ್ಕ ಶಾಸ್ತ್ರ, ಬ್ಯಾಂಕಿಂಗ್, ವಿಮೆ, ವ್ಯವಹಾರಿಕ ಅಂಕ ಗಣಿತ, ಉದ್ದಿಮೆ ಅಭಿವೃದ್ಧಿ ಮತ್ತು ನಿರ್ವಹಣೆಗಳೊಡನೆ ತಾಂತ್ರಿಕ ಕೌಶಲ್ಯಗಳಾದ ಕಂಪ್ಯೂಟರ್ ಬೇಸಿಕ್ಸ್, ಎಂಎಸ್ ಆಫೀಸ್, ಅಂತರ್ಜಾಲ, ಮುಂತಾದ ವಿಷಯಗಳನ್ನು ಬೋಧಿಸಲಾಗುತ್ತದೆ.

**2. ಈ ವಿಭಾಗದಲ್ಲಿ ದೊರೆಯಬಹುದಾದ ಶೈಕ್ಷಣಿಕ ಸೌಲಭ್ಯಗಳು?**

ಈ ವಿಭಾಗವು ಆಧುನಿಕ ರೀತಿಯ ಪ್ರಯೋಗಾಲಯವನ್ನು ಹೊಂದಿದ್ದು, ಇಲ್ಲಿಯ ವ್ಯಾಸಂಗಕ್ಕೆ ಅವಶ್ಯಕವಾದ ಕಂಪ್ಯೂಟರ್‌ಗಳು, ಪ್ರಿಂಟರ್, ಸ್ಕ್ಯಾನರ್‌ಗಳಿವೆ. ಬೋಧನಾ ಕೊಠಡಿಗಳು ಈ ವಿದ್ಯಾರ್ಥಿಗಳು ಅಡಚಣೆಯಾಗದ ರೀತಿಯಲ್ಲಿ ಇದ್ದು, ತ್ಯಾಗ ಮನೋಭಾವವುಳ್ಳ ಸಿಬ್ಬಂದ್ದಿವರ್ಗದವರು ಸೇವೆ ಸಲ್ಲಿಸುತ್ತಿದ್ದಾರೆ.

**3. ಕೋರ್ಸ್ ಪೂರ್ಣಗೊಳಿಸಿದ ನಂತರ ಮುಂದೇನು ಮಾಡಬಹುದು?**

ಕೋರ್ಸ್ ಉತ್ತೀರ್ಣರಾದ ವಿದ್ಯಾರ್ಥಿಗಳು ಸರ್ಕಾರಿ ಮತ್ತು ಅರೆ-ಸರ್ಕಾರಿ ಸಂಸ್ಥೆಗಳು, ಸರ್ಕಾರೇತರ ಸಂಸ್ಥೆಗಳಲ್ಲಿ ಅಂದರೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ದೇನಾ ಬ್ಯಾಂಕ್, ಮುಂತಾದವುಗಳಲ್ಲಿ ವಾಣಿಜ್ಯ ನಿರ್ವಹಣೆ ಸಂಸ್ಥೆಗಳಾದ ವಿಪ್ರೊ, ಐಬಿಎಂ, ಮುಂತಾದ ಕಡೆ ಉದ್ಯೋಗವಕಾಶ ಪಡೆದಿರುತ್ತಾರೆ. ಅಂಧತ್ವವುಳ್ಳ ವಿದ್ಯಾರ್ಥಿಗಳು ಸಹ ಬೆಂಗಳೂರು ವಿಶ್ವವಿದ್ಯಾನಿಲಯದಿಂದ ನೇರವಾಗಿ 2ನೇ ವರ್ಷದ ಬಿ.ಕಾಂ / ಬಿ.ಬಿ.ಎಂ ಪದವಿ ತರಗತಿಗೆ ಪ್ರವೇಶಾತಿ ಪಡಯಲು ಅವಕಾಶವಿದೆ.

**4. ವಿಭಾಗದಲ್ಲಿ ಯಶಸ್ವಿಯಾಗಿರುವ ಹಿರಿಯ ವಿದ್ಯಾರ್ಥಿಗಳು ಯಾವ ಯಾವ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ?**

ಈ ಕೋರ್ಸನ್ನು ಪೂರ್ಣಗೊಳಿಸಿರುವ ಅಂಥತ್ವವುಳ್ಳ ವಿದ್ಯಾರ್ಥಿಗಳು ಉದ್ದಿಮಿಗಳು / ವಾಣಿಜ್ಯ ವ್ಯವಹಾರ ನಿರ್ವಾಹಣ ಸಂಸ್ಥೆಗಳು ಸೇರಿದಂತೆ ಕೆಳಕಂಡ ಸಂಸ್ಥೆಗಳಲ್ಲಿ ಉದ್ಯೋಗವಕಾಶ ಪಡೆದಿರುತ್ತಾರೆ.

1. ನಿಂಗರಾಜ ಸೋಮಪ್ಪ ಕಂಬಳ, ಕ್ಲರ್ಕ್, ದೇನಾ ಬ್ಯಾಂಕ್, ಹುಬ್ಬಳ್ಳಿ
2. ಶ್ರೀಧರ್ ಟಿ ಎಸ್, ಕ್ಲರ್ಕ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯ, ಬೆಂಗಳೂರು
3. ನಿಖಿಲ್ ದತ್ತಾತ್ರೇಯ ಗಾಟಗೆ, ಅಸೋಸಿಯೇಟ್ ಇಂಜಿನಿಯರ್, ವಿಪ್ರೊ ಇನ್‌ಫೋಟೆಕ್, ಮೈಸೂರು
4. ಶ್ರೀನಿವಾಸ್, ಎಂವಿಎಲ್‌ಇಎಸ್, ಕಸ್ಟಮರ್ ಸಪೋರ್ಟ್, ಐಬಿಎಂ, ಬೆಂಗಳೂರು
5. ಮೋಹಿತ್ ಬಿ ಪಿ, ಐ ಟಿ ಕೋ-ಆರ್ಡಿನೇಟರ್, ಎನೇಬಲ್ ಇಂಡಿಯ, ಬೆಂಗಳೂರು
6. ಮಯೂರ್ ದೂಪಡ್, ಎಸ್‌ಡಿಎ, ಮಂಗಳೂರು.
7. ಲಕ್ಷ್ಮೀ ಆರ್, ಎಸ್‌ಡಿಎ, ಸಿಟಿ ಸಿವಿಲ್ ಕೋರ್ಟ್, ಬೆಂಗಳೂರು
8. ವಿಕ್ರಂ ಎಂ ಮಟ್ಟಿಕಳ್ಳಿ, ಎಸ್‌ಡಿಎ, ಸೀನಿಯರ್ ಸಿವಿಲ್ ಕೋರ್ಟ್, ಬೆಳಗಾವಿ
9. ವಿಜಯ್ ಕುಮಾರ್ ಎನ್ ಆರ್, ಎಂಬೋಸರ್ ಆಪರೇಟರ್, ಸಹನ ಚಾರಿಟೆಬಲ್ ಟ್ರಸ್ಟ್, ಬೆಂಗಳೂರು
10. ಮಲ್ಲಿಕಾರ್ಜುನ ಶೀಲವಂತ್, ಕಂಪ್ಯೂಟರ್ ಶಿಕ್ಷಕರು, ಮಹೇಶ್ವರಿ ಅಂಧ ಮಕ್ಕಳ ಶಾಲೆ, ಬೆಳಗಾಂ ಮುಂತಾದವು

**5. ಡಿಪ್ಲೋಮ ಪೂರ್ಣಗೊಳಿಸಿದ ನಂತರ ದೊರೆಯಬಹುದಾದ ಉದ್ಯೋಗವಕಾಶಗಳು?**

ಕೋರ್ಸ್‌ನಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳು ಸರ್ಕಾರಿ / ಖಾಸಗಿ / ವಾಣಿಜ್ಯ ವ್ಯವಹಾರ ಸಂಸ್ಥೆಗಳಲ್ಲಿ ಕಂಪ್ಯೂಟರ್ ಆಪರೇಟರ್‌ಗಳು, ಆಡಳಿತ ಸಹಾಯಕರು, ಅಸೋಸಿಯೇಟ್ ಇಂಜಿನಿಯರ್, ದ್ವಿತೀಯ ದರ್ಜೆ ಸಹಾಯಕರು, ಟೆಲಿಕಾಲರ್ಸ್, ಕಾಲ್ ಸೆಂಟರ್‌ಗಳಲ್ಲಿ ಕಾರ್ಯನಿರ್ವಾಹಕರು, ಬೆರಳಚ್ಚುಗಾರರು, ಸ್ವಾಗತಕಾರರು, ಮುಂತಾದ ಉದ್ಯೋಗಾವಕಾಶಗಳನ್ನು ಪಡೆಯಬಹುದು.

**6. ಉದ್ಯೋಗದ ನಂತರ ಪಡೆಯಬಹುದಾದ ವೇತನ?**

ಕೋರ್ಸನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಪ್ರತಿ ಮಾಹೆ ಸುಮಾರು ರೂ. 5,000/- ಗಳಿಂದ ರೂ. 18,000/- ಗಳಗಿಂತ ಹೆಚ್ಚು ವೇತನವನ್ನು ಪಡೆಯಬಹುದು.

**7. ಸಂಸ್ಥೆಯು ಉದ್ಯೋಗ ಮಾಹಿತಿ ಕೇಂದ್ರವನ್ನು ಹೊಂದಿದೆಯೇ?**

ಹೌದು. ಪಾಲಿಟೆಕ್ನಿಕ್ ಉದ್ಯೋಗ ಮತ್ತು ತರಬೇತಿ ಕೇಂದ್ರವನ್ನು ಹೊಂದಿದ್ದು, ಇದರ ಮೂಲಕ ಉದ್ಯೋಗವಕಾಶವನ್ನು ಕಲ್ಪಿಸಿಕೊಡಲಾಗುತ್ತದೆ.

**8. ಯಾವ ಯಾವ ಸಂಸ್ಥೆಗಳು ಉದ್ಯೋಗ ಮತ್ತು ತರಬೇತಿ ಕೇಂದ್ರದ ಮೂಲಕ ಉದ್ಯೋಗವಕಾಶ ಕಲ್ಪಿಸಿವೆ?**

ಐಬಿಎಂ, ಬೆಂಗಳೂರು, ವಿಪ್ರೊ ಇನ್‌ಫೋಟೆಕ್, ಮೈಸೂರು, ಸನ್ ಐಟಿಸ್ ಕನ್ಸಲ್ಟಿಂಗ್ ಪ್ರೈ. ಲಿ., ಆದಿತ್ಯ ಬಿರ್ಲಾ, ಎಂಫಾಸಿಸ್, ಸ್ಟ್ರಾಟೆಜಿಕ್ ಔಟ್‌ಸೋರ್ಸಿಂಗ್ ಪ್ರೈ. ಲಿ., ಮುಂತಾದವುಗಳು ಉದ್ಯೋಗವಕಾಶ ಕಲ್ಪಿಸಿವೆ.

**9. ಡಿಪ್ಲೋಮ ಕೋರ್ಸ್ ಅನ್ನು ಪೂರ್ಣಗೊಳಿಸಿದ ನಂತರ ಕೈಗೊಳ್ಳಬಹುದಾದ ಉನ್ನತ ವ್ಯಾಸಂಗ?**

ಈ ಕೋರ್ಸನ್ನು ಪೂರ್ಣಗೊಳಿಸಿದ ವಿದ್ಯಾರ್ಥಿಗಳು ಬಿ.ಕಾಂ / ಬಿಬಿಎಂ ಪದವಿ ತರಗತಿಗಳಿಗೆ ಪ್ರವೇಶಾತಿ ಪಡೆಯಬಹುದು.